ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ


ಸಂಪುಟ : 6 । ಸಂಚಿಕೆ : 7 । ಜುಲೈ - 2024 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ




ನರೇಂದ್ರ ಮೋದಿ
ಮಾನ್ಯ ಪ್ರಧಾನಮಂತ್ರಿಗಳು

## 3ನೇ ಬಾರಿಗೆ ಪ್ರಧಾನಿಯಾಗಿ
## ನರೇಂದ್ರ ಮೋದಿ

## ಕೇಂದ್ರ ಸಹಕಾರ ಸಚಿವರಾಗಿ
## ಅಮಿತ್ ಶಾ



ಅಮಿತ್ ಶಾ.
ಕೇಂದ್ರ ಗೃಹ ಮತ್ತು ಸಹಕಾರ ಖಾತೆ ಸಚಿವರು



ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವರು



ಹೆಚ್.ಡಿ. ಕುಮಾರಸ್ವಾಮಿ
ಬೃಹತ್ ಕೈಗಾರಿಕೆ ಮತ್ತು
ಉಕ್ಕು ಖಾತೆ ಸಚಿವರು



ಪ್ರಲ್ಹಾದ್ ಜೋಷಿ
ಕೇಂದ್ರ ಆಹಾರ ಮತ್ತು ಪಡಿತರ
ವಿತರಣೆ ಖಾತೆ ಸಚಿವರು



ಶೋಭಾ ಕರಂದ್ಲಾಜೆ
ಕೇಂದ್ರ ಸಣ್ಣ, ಮಧ್ಯಮ
ಕೈಗಾರಿಕೆ ಖಾತೆ ಸಚಿವರು



ವಿ. ಸೋಮಣ್ಣ
ಕೇಂದ್ರ ಜಲಶಕ್ತಿ
ಮತ್ತು ರೈಲ್ವೆ ಖಾತೆ ಸಚಿವರು



ಕ್ರಿಶಿನ್‌ಪಾಲ್ ಗುರ್ಜರ್
ಕೇಂದ್ರ ಸಹಾಯಕ ಸಹಕಾರ ಖಾತೆ ಸಚಿವರು





ಮುರಳೀಧರ್ ಮೊಹೋಲ್
ಕೇಂದ್ರ ಸಹಾಯಕ ಸಹಕಾರ ಖಾತೆ ಸಚಿವರು

## ಜುಲೈ 6
## ಅಂತಾರಾಷ್ಟ್ರೀಯ
## ಸಹಕಾರ ದಿನಾಚರಣೆ



# ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಸಮಿತಿ ಸಭೆ





**ಬೆಂಗಳೂರು :** ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿ ಸಮಿತಿ ಸಭೆಯು ಶಾಸಕರು ಹಾಗೂ ಸಮಿತಿ ಅಧ್ಯಕ್ಷರಾದ ಲಕ್ಷ್ಮಣ ಸಂಗಪ್ಪ ಸವದಿ ಅವರ ಅಧ್ಯಕ್ಷತೆಯಲ್ಲಿ, ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರ ಉಪಸ್ಥಿತಿಯಲ್ಲಿ ನಡೆಯಿತು.

ಸಭೆಯಲ್ಲಿ ಸಮಿತಿ ಸದಸ್ಯರುಗಳು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡ, ಶಿವರಾಮ್ ಅರಬೈಲ್ ಹೆಬ್ಬಾರ್, ಕೆ. ಷಡಕ್ಷರಿ, ಮಾಜಿ ಸಚಿವರಾದ ಎಸ್.ಆರ್. ಪಾಟೀಲ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರಕುಮಾರ್, ಸಹಕಾರ ಇಲಾಖೆ ಕಾರ್ಯದರ್ಶಿಗಳಾದ ಡಾ. ಎಂ.ಎನ್. ಅಜಯ್ ನಾಗಭೂಷಣ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಎ.ಸಿ. ದಿವಾಕರ್, ನಿವೃತ್ತ ಅಪರ ನಿಬಂಧಕರುಗಳಾದ ರಮಣರೆಡ್ಡಿ, ಎಚ್.ಎಸ್. ನಾಗರಾಜಯ್ಯ, ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ಜಿ.ಎಂ. ರವೀಂದ್ರ, ಜಂಟಿ ನಿಬಂಧಕರುಗಳಾದ ಕಲ್ಲಪ್ಪ ಓಬಣ್ಣಗೋಳ, ನೀಲಪ್ಪ ಸಿದ್ದಣ್ಣನವರ್, ಲಕ್ಷ್ಮೀಪತಯ್ಯ, ಪಿ. ಮಹೇಶ್ ಅವರುಗಳು ಸೇರಿದಂತೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆಯಲ್ಲಿ ಸಹಕಾರ ಇಲಾಖೆಯ ನೂತನ ಕಾರ್ಯದರ್ಶಿಗಳಾದ ಡಾ. ಎಂ.ಎನ್. ಅಜಯ್ ನಾಗಭೂಷಣ್ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರು ಆತ್ಮೀಯವಾಗಿ ಸ್ವಾಗತಿಸಿ, ಶುಭಕೋರಿದರು.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಆಲಗೂರ
ನಿರ್ದೇಶಕರು




ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು




ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

**ಕಳೆದ ಸರ್ಕಾರದ ಅವಧಿಯಲ್ಲಿ ಅಮಿತ್ ಶಾ ಅವರು ದೇಶದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಉತ್ತಮ ಮಾರ್ಗದರ್ಶನ ನೀಡಿರುವುದನ್ನು ಕಾಣಬಹುದಾಗಿದೆ. ಮುಂಬರುವ ದಿನಗಳಲ್ಲಿ ದೇಶದ ಸಹಕಾರ ಚಳವಳಿ ಮತ್ತಷ್ಟು ವೇಗ ಪಡೆಯಲಿದೆ ಎಂಬ ಭರವಸೆಯೂ ಇದೆ. ದೇಶದಲ್ಲಿ ಕುಂಠಿತವಾಗಿರುವ ಸಹಕಾರ ವಲಯಗಳನ್ನು ಗುರುತಿಸಿ ಅಭಿವೃದ್ಧಿಪಡಿಸುವುದು ಅತ್ಯಂತ ಅಗತ್ಯವೂ ಹೌದು.**

# ಸಹಕಾರ ಸಚಿವಾಲಯದಿಂದ ಹೆಚ್ಚಿದ ನಿರೀಕ್ಷೆಗಳು, ಜುಲೈ–6, ಅಂತಾರಾಷ್ಟ್ರೀಯ ಸಹಕಾರ ದಿನ

ಲೋಕಸಭಾ ಚುನಾವಣೆ ಮುಗಿದು ಪ್ರಧಾನಮಂತ್ರಿ ನರೇಂದ್ರಮೋದಿ ಅವರ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದೆ. ಕರ್ನಾಟಕದಿಂದ ನಿರ್ಮಲಾ ಸೀತಾರಾಮನ್, ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಷಿ, ವಿ.ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆ ಅವರುಗಳು ಸಚಿವರುಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಕರ್ನಾಟಕ ರಾಜ್ಯದಿಂದ ಲೋಕಸಭೆಗೆ ಆಯ್ಕೆಯಾಗಿರುವ ಎಲ್ಲಾ ಸಂಸದರಿಗೆ ಪತ್ತಿನ ಮಹಾಮಂಡಳವು ಶುಭಾಷಯ ಅಭಿನಂದನೆಗಳನ್ನು ಸಲ್ಲಿಸುತ್ತದೆ. ವಿಧಾನ ಪರಿಷತ್ತಿಗೆ ಆಯ್ಕೆಯಾದ ಶಾಸಕರುಗಳಿಗೆ ಮಹಾಮಂಡಳವು ಶುಭಾಶಯ, ಅಭಿನಂದನೆಗಳನ್ನು ಸಲ್ಲಿಸುತ್ತದೆ. ರಾಜ್ಯದಿಂದ ಆಯ್ಕೆಯಾದ ಸಂಸದರು – ಸಚಿವರುಗಳು ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿಗೆ ಒತ್ತು ನೀಡಲಿದ್ದಾರೆ ಎಂದು ಆಶಿಸಲಾಗಿದೆ. ಕೇಂದ್ರ ಸಚಿವ ಸಂಪುಟದಲ್ಲಿ ಹಿರಿಯ ಸಹಕಾರಿ ಮುಖಂಡರೂ ಆಗಿರುವ ಅಮಿತ್ ಶಾ ಅವರು ಗೃಹಖಾತೆ ಜೊತೆಗೆ ಸಹಕಾರ ಖಾತೆಯ ಜವಾಬ್ದಾರಿಯನ್ನು ಹೊತ್ತಿರುವುದು ಅಭಿನಂದನೀಯ ವಿಚಾರ.

ಕಳೆದ ಸರ್ಕಾರದ ಅವಧಿಯಲ್ಲಿ ಅಮಿತ್ ಶಾ ಅವರು ದೇಶದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಉತ್ತಮ ಮಾರ್ಗದರ್ಶನ ನೀಡಿರುವುದನ್ನು ಕಾಣಬಹುದಾಗಿದೆ. ಮುಂಬರುವ ದಿನಗಳಲ್ಲಿ ದೇಶದ ಸಹಕಾರ ಚಳವಳಿ ಮತ್ತಷ್ಟು ವೇಗ ಪಡೆಯಲಿದೆ ಎಂಬ ಭರವಸೆಯೂ ಇದೆ. ದೇಶದಲ್ಲಿ ಕುಂಠಿತವಾಗಿರುವ ಸಹಕಾರ ವಲಯಗಳನ್ನು ಗುರುತಿಸಿ ಅಭಿವೃದ್ಧಿಪಡಿಸುವುದು ಅತ್ಯಂತ ಅಗತ್ಯವೂ ಹೌದು.

2024ರ ಜುಲೈ–6, ಅಂತಾರಾಷ್ಟ್ರೀಯ ಸಹಕಾರ ದಿನವನ್ನಾಗಿ ವಿಶ್ವದಾದ್ಯಂತ "ಸಹಕಾರ ಸಂಸ್ಥೆಗಳು ಎಲ್ಲರಿಗೂ ಉತ್ತಮ ಭವಿಷ್ಯವನ್ನು ನಿರ್ಮಿಸುತ್ತವೆ" ಎಂಬ ಧ್ಯೇಯದೊಂದಿಗೆ ಆಚರಿಸಲಾಗುತ್ತಿದ್ದು ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು ಈ ದಿವಸವನ್ನು ಆಚರಿಸಿ ಭವಿಷ್ಯದ ದೃಷ್ಠಿಯಲ್ಲಿ ಚಳವಳಿಯನ್ನು ಬೆಳೆಸಲು ನಿರ್ದಿಷ್ಠ ಯೋಜನೆಗಳನ್ನು ಹಮ್ಮಿಕೊಳ್ಳಲಿ ಎಂದು ಆಶಿಸುತ್ತಾ, ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಗೆ ಶುಭ ಕೋರುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

## ಸಹಕಾರ ಇಲಾಖೆ ಕಾರ್ಯದರ್ಶಿಯವರಿಂದ ಸಹಕಾರ ಸಚಿವರ ಭೇಟಿ




ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿ ಅಧಿಕಾರ ಸ್ವೀಕರಿಸಿರುವ ಡಾ. ಎಂ.ಎನ್. ಅಜಯ್ ನಾಗಭೂಷಣ್ ಅವರು ಕಳೆದವಾರ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರನ್ನು ಭೇಟಿಮಾಡಿ ಶುಭಾಶಯ ಸಲ್ಲಿಸಿದರು. ಕರ್ನಾಟಕ ಹಾಲು ಮಹಾಮಂಡಳಿಯ ಅಧ್ಯಕ್ಷರಾದ ಎಲ್.ಬಿ.ಪಿ. ಭೀಮಾನಾಯಕ್, ಶಾಸಕರು ಹಾಗೂ ಕೋಲಾರ ಹಾಲು ಒಕ್ಕೂಟದ ಅಧ್ಯಕ್ಷರಾದ ವೈ.ಎನ್. ನಂಜೇಗೌಡ ಅವರುಗಳು ಉಪಸ್ಥಿತರಿದ್ದರು.

**ಸುಭಾಷಿತ :** ಈಗ ಕಾಡುಗಳಿಲ್ಲದ, ಕಾಡು ಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ – ಪೂರ್ಣಚಂದ್ರ ತೇಜಸ್ವಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾಗಿ ಅಮಿತ್ ಶಾ, ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾಗಿ ಹೆಚ್.ಡಿ. ಕುಮಾರಸ್ವಾಮಿ, ಸಹಾಯಕ ಸಹಕಾರ ಸಚಿವರಾಗಿ ಕ್ರಿಶಿನ್‌ಪಾಲ್ ಗುರ್ಜರ್ ಮತ್ತು ಮುರಳೀಧರ ಮೊಹೋಲ್



**ಅಮಿತ್ ಶಾ.**
ಕೇಂದ್ರ ಗೃಹ ಮತ್ತು ಸಹಕಾರ ಖಾತೆ ಸಚಿವರು



**ಹೆಚ್.ಡಿ. ಕುಮಾರಸ್ವಾಮಿ**
ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರು



**ಕ್ರಿಶಿನ್‌ಪಾಲ್ ಗುರ್ಜರ್**
ಕೇಂದ್ರ ಸಹಾಯಕ ಸಹಕಾರ ಖಾತೆ ಸಚಿವರು



**ಮುರಳೀಧರ್ ಮೊಹೋಲ್**
ಕೇಂದ್ರ ಸಹಾಯಕ ಸಹಕಾರ ಖಾತೆ ಸಚಿವರು



**ಪ್ರಲ್ಹಾದ್ ಜೋಶಿ**
ಕೇಂದ್ರ ಆಹಾರ ಮತ್ತು ಪಡಿತರ ವಿತರಣೆ ಹಾಗೂ ಗ್ರಾಹಕ ವ್ಯವಹಾರಗಳು ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವರು



**ಶೋಭಾ ಕರಂದ್ಲಾಜೆ**
ಕೇಂದ್ರ ಸಣ್ಣ, ಮಧ್ಯಮ ಕೈಗಾರಿಕೆ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ಖಾತೆ ಸಚಿವರು



**ವಿ. ಸೋಮಣ್ಣ**
ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ಸಚಿವರು

**ನವದೆಹಲಿ :** ಮೂರನೇ ಅವಧಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕಾರ ಮಾಡಿರುವ ನರೇಂದ್ರ ಮೋದಿ ಅವರು ಸಂಪುಟದ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಹಣಕಾಸು ಖಾತೆಯನ್ನು ನಿರ್ಮಲಾ ಸೀತಾರಾಮನ್, ಗೃಹ ಮತ್ತು ಸಹಕಾರ ಖಾತೆಯನ್ನು ಅಮಿತ್ ಶಾ, ರಕ್ಷಣಾ ಖಾತೆಯನ್ನು ರಾಜನಾಥ್‌ಸಿಂಗ್ ಅವರಿಗೆ ನೀಡಲಾಗಿದೆ.

ರಾಜ್ಯದಿಂದ ಸಂಪುಟದಲ್ಲಿ ಸ್ಥಾನ ಪಡೆದಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ, ಪ್ರಲ್ಹಾದ್ ಜೋಶಿ ಅವರಿಗೆ ಆಹಾರ ಮತ್ತು ಪಡಿತರ ವಿತರಣೆ ಹಾಗೂ ಗ್ರಾಹಕ ವ್ಯವಹಾರಗಳು ಮತ್ತು ನವೀಕರಿಸಬಹುದಾದ ಇಂಧನ ಖಾತೆ, ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಸಣ್ಣ, ಮಧ್ಯಮ ಕೈಗಾರಿಕೆ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ಖಾತೆ ಹಾಗೂ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ಜಲಶಕ್ತಿ ಮತ್ತು ರೈಲ್ವೇ ಖಾತೆ ಸಚಿವರಾಗಿದ್ದಾರೆ.

ಕೇಂದ್ರ ಸಚಿವರಾದ ಶಿವರಾಜ್ ಸಿಂಗ್ ಚವ್ಹಾಣ್ ಅವರಿಗೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ, ನಿತಿನ್ ಗಡ್ಕರಿ ಅವರಿಗೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಇಲಾಖೆ ಖಾತೆ, ಎಸ್. ಜೈಶಂಕರ್‌ಗೆ ವಿದೇಶಾಂಗ ಖಾತೆ, ಜೆ.ಪಿ. ನಡ್ಡಾ ಅವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆ, ರಾಜೀವ್ ರಂಜನ್ ಸಿಂಗ್ ಅವರಿಗೆ ಪಂಚಾಯತ್ ರಾಜ್ ಇಲಾಖೆ, ಮೀನುಗಾರಿಕೆ ಹಾಗೂ ಪಶುಸಂಗೋಪನೆ ಇಲಾಖೆ, ಚಿರಾಗ್ ಪಾಸ್ವಾನ್ ಅವರಿಗೆ ಆಹಾರ ಸಂಸ್ಕರಣೆ ಖಾತೆ ನೀಡಲಾಗಿದೆ. ಉಳಿದ ಸಚಿವರುಗಳಿಗೆ ಖಾತೆಗಳ ಹಂಚಿಕೆಯನ್ನು ಮಾಡಿರುವ ಪ್ರಧಾನಿ ಮೋದಿ ಅವರು

7ನೇ ಪುಟಕ್ಕೆ...

## ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು



ಬಸವರಾಜ ಬೊಮ್ಮಾಯಿ
ಹಾವೇರಿ



ಜಗದೀಶ್ ಶೆಟ್ಟರ್
ಬೆಳಗಾವಿ



ರಮೇಶ್ ಜಿಗಜಿಣಗಿ
ವಿಜಯಪುರ



ಪಿ.ಸಿ. ಗದ್ದಿಗೌಡರ್
ಬಾಗಲಕೋಟೆ



ವಿಶ್ವೇಶ್ವರ ಹೆಗಡೆ ಕಾಗೇರಿ
ಉತ್ತರ ಕನ್ನಡ



ಪಿ.ಸಿ. ಮೋಹನ್
ಬೆಂಗಳೂರು ಕೇಂದ್ರ



ಬಿ.ವೈ. ರಾಘವೇಂದ್ರ
ಶಿವಮೊಗ್ಗ



ಗೋವಿಂದ ಕಾರಜೋಳ
ಚಿತ್ರದುರ್ಗ



ತೇಜಸ್ವಿ ಸೂರ್ಯ
ಬೆಂಗಳೂರು ದಕ್ಷಿಣ



ಡಾ. ಕೆ. ಸುಧಾಕರ್
ಚಿಕ್ಕಬಳ್ಳಾಪುರ



ಕೋಟಾ ಶ್ರೀನಿವಾಸ ಪೂಜಾರಿ
ಉಡುಪಿ–ಚಿಕ್ಕಮಗಳೂರು



ರಾಧಾಕೃಷ್ಣ ದೊಡ್ಡಮನಿ
ಗುಲ್ಬರ್ಗ



ಡಾ. ಸಿ.ಎನ್. ಮಂಜುನಾಥ್
ಬೆಂಗಳೂರು ಗ್ರಾಮಾಂತರ



ರಾಜಶೇಖರ್ ಹಿಟ್ನಾಳ
ಕೊಪ್ಪಳ



ಈ. ತುಕಾರಾಂ
ಬಳ್ಳಾರಿ



ಜಿ. ಕುಮಾರ್ ನಾಯ್ಕ
ರಾಯಚೂರು

* ಕೇಂದ್ರ ಸಂಪುಟಕ್ಕೆ ಸಚಿವರುಗಳಾಗಿ ಪ್ರಮಾಣ ವಚನ ಸ್ವೀಕರಿಸಿರುವ ರಾಜ್ಯದ ನೂತನ ಲೋಕಸಭಾ ಸದಸ್ಯರಾದ ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಹಾಗೂ ವಿ. ಸೋಮಣ್ಣ ಅವರುಗಳ ಭಾವಚಿತ್ರದೊಂದಿಗೆ ವಿವರಗಳನ್ನು ಪುಟ 5 ಮತ್ತು 7ರಲ್ಲಿ ನೀಡಲಾಗಿದೆ.



ಡಾ. ಪ್ರಭಾ ಮಲ್ಲಿಕಾರ್ಜುನ್
ದಾವಣಗೆರೆ



ಎಂ. ಶ್ರೇಯಸ್ ಪಟೇಲ್
ಹಾಸನ



ಕ್ಯಾ. ಬ್ರಿಜೇಶ್ ಚೌಟ
ದಕ್ಷಿಣ ಕನ್ನಡ



ಯದುವೀರ್ ಒಡೆಯರ್
ಮೈಸೂರು – ಕೊಡಗು



ಸುನೀಲ್ ಬೋಸ್
ಚಾಮರಾಜನಗರ



ಎಂ. ಮಲ್ಲೇಶ್ ಬಾಬು
ಕೋಲಾರ



ಪ್ರಿಯಾಂಕಾ ಜಾರಕಿಹೊಳಿ
ಚಿಕ್ಕೋಡಿ



ಸಾಗರ ಈಶ್ವರ ಖಂಡ್ರೆ
ಬೀದರ್

...5ನೇ ಪುಟದಿಂದ

ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು, ಪಿಂಚಣಿ, ಅಣುಶಕ್ತಿ, ಬಾಹ್ಯಾಕಾಶ ಇಲಾಖೆಯನ್ನು ತಮ್ಮ ಬಳಿ ಇರಿಸಿಕೊಂಡಿದ್ದಾರೆ.

ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಪ್ರಮುಖ ಖಾತೆ ದೊರೆತಿದ್ದು, ಕೈಗಾರಿಕೆಗಳ ಮೂಲಕ ದೇಶದ ಅಭಿವೃದ್ಧಿ ಅಡಗಿದೆ. ಉತ್ಪಾದನಾ ಕ್ಷೇತ್ರದಲ್ಲಿ ಬಹಳ ನಿರೀಕ್ಷೆಗಳಿವೆ. ಉದ್ಯೋಗಸೃಷ್ಟಿ ಮತ್ತು ಉದ್ಯೋಗವಕಾಶ ಸೇರಿದಂತೆ ಹಲವು ಸಮಸ್ಯೆಗಳನ್ನು ಬಗೆಹರಿಸಲು ಈ ಇಲಾಖೆಯಿಂದ ಸಾಧ್ಯವಾಗಲಿದೆ.

ಕೇಂದ್ರ ಸಹಾಯಕ ಸಚಿವ ವಿ. ಸೋಮಣ್ಣ ಅವರಿಗೆ ಜಲಶಕ್ತಿ ಮತ್ತು ರೈಲ್ವೆ ಖಾತೆ ಜವಾಬ್ದಾರಿ ನೀಡಿರುವುದು ಎರಡು ಖಾತೆಗಳು ಮಹತ್ವದ್ದಾಗಿದ್ದು, ರಾಜ್ಯದ ಜಲಸಂಪನ್ಮೂಲ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಜವಾಬ್ದಾರಿ ಮಹತ್ವ ಪಡೆದುಕೊಂಡಿದೆ. ಅಲ್ಲದೆ, ರೈಲ್ವೆ ಖಾತೆಯ ರಾಜ್ಯ ಸಚಿವರಾಗಿರುವುದರಿಂದ ರಾಜ್ಯಕ್ಕೆ ಅನುಕೂಲ ಎನಿಸುವ ಮತ್ತು ಬಾಕಿ ಉಳಿದಿರುವ ಯೋಜನೆಗಳಿಗೆ ವೇಗ ನೀಡುವ ಕೆಲಸವನ್ನು ಸೋಮಣ್ಣ ಅವರಿಂದ ನಿರೀಕ್ಷಿಸಬಹುದಾಗಿದೆ. ಜಗತ್ ಪ್ರಕಾಶ್ ನಡ್ಡಾ ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮತ್ತು ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರನ್ನಾಗಿ ನೇಮಿಸಲಾಗಿದೆ. ಇಫ್ಕೋ ಮತ್ತು ಕ್ರಿಬ್ಕೋ ನಂತಹ ಪ್ರಮುಖ ಸಹಕಾರಿ ಸಂಸ್ಥೆಗಳು ದೇಶದಲ್ಲಿ ರಸಗೊಬ್ಬರಗಳ ಉತ್ಪಾದನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.


**ಸಹಕಾರ ಇಲಾಖೆಗೆ ಮಹತ್ವ ನೀಡಿದ ಸರ್ಕಾರ :** ಪ್ರಧಾನಿ ಮೋದಿ ಅವರು ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ಗೃಹ ಖಾತೆಯ ಜೊತೆಗೆ ಸಹಕಾರ ಖಾತೆಯನ್ನು ಹಂಚಿಕೆ ಮಾಡಿದ್ದಾರೆ. ಕಳೆದ ಸರ್ಕಾರದಲ್ಲಿ ಅಮಿತ್ ಶಾ ಅವರು ಸಹಕಾರ ಇಲಾಖೆಯ ಸಚಿವರಾದ ನಂತರ ಇಲಾಖೆಯಲ್ಲಿ ಸಾಕಷ್ಟು ಸುಧಾರಣಾ ಕ್ರಮಗಳನ್ನು ತಂದಿದ್ದರು. ಪ್ಯಾಕ್ಸ್‌ಗಳನ್ನು ಬಹುಸೇವಾ ಕೇಂದ್ರಗಳಾಗಿ ರೂಪಿಸುವುದರ ಜೊತೆಗೆ ಗಣಕೀಕರಣ ವ್ಯವಸ್ಥೆ ಹಾಗೂ ರಾಷ್ಟ್ರದ 8.5 ಲಕ್ಷ ಸಹಕಾರ ಸಂಸ್ಥೆಗಳ ಮಾಹಿತಿಗಳನ್ನು ಕ್ರೋಢೀಕರಿಸಿ ಮಾಹಿತಿ ಕಣಜವನ್ನಾಗಿ (ಡೇಟಾ ಬೇಸ್ ಸೆಂಟರ್) ಮಾಡಿರುವುದು, ರಾಷ್ಟ್ರೀಯ ಮಟ್ಟದಲ್ಲಿ ಸಾವಯವ ಸಹಕಾರ ಸಂಸ್ಥೆ, ರಫ್ತು ಸಹಕಾರ ಸಂಸ್ಥೆ ಮತ್ತು ಬಿತ್ತನೆ ಬೀಜ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕಿರುವುದು ವಿಶೇಷವಾಗಿದೆ. ಅಲ್ಲದೆ, ಸಹಕಾರ ಇಲಾಖೆಯಲ್ಲಿ 54 ವಿಶೇಷ ಯೋಜನೆಗಳ ಅನುಷ್ಠಾನಕ್ಕೆ ಕ್ರಮಕೈಗೊಂಡಿರುವುದು ಹಾಗೂ ರಾಷ್ಟ್ರೀಯ ಸಹಕಾರ ನೀತಿ ಸಮಿತಿ ರಚಿಸಲಾಗಿದ್ದು, ಸಮಿತಿಯು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿರುತ್ತದೆ. ನೂತನ ಸಚಿವ ಸಂಪುಟದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೇಂದ್ರ ಸಹಾಯಕ ಸಚಿವರುಗಳಾದ ಕೃಷ್ಣಪಾಲ್ ಗುಜ್ಜಾರ್ ಮತ್ತು ಮುರಳೀಧರ್ ಮೋಹಲ್ ಅವರುಗಳಿಗೆ ಸಹಾಯಕ ಸಹಕಾರ ಖಾತೆಯ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಈ ಮೂಲಕ ಕೇಂದ್ರ ಸರ್ಕಾರ ಸಹಕಾರ ವಲಯದ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿರುವುದು ಗಮನಾರ್ಹ ವಿಷಯವಾಗಿದೆ. ಎನ್‌ಸಿಯುಐನ ಅಧ್ಯಕ್ಷರಾದ ದಿಲೀಪ್ ಸಂಘಾನಿ ಅವರು ಅಮಿತಾ ಶಾ ಅವರು ಪುನರ್ ಸಹಕಾರ ಸಚಿವರಾಗಿ ನೇಮಕಗೊಂಡ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಶಾ ಅವರ ಹಿಂದಿನ ಅವಧಿಯಲ್ಲಿ ಅವರು ಪ್ರಾರಂಭಿಸಿದ 54 ಹೊಸ ಯೋಜನೆಗಳು ಅನುಷ್ಠಾನಗಳು ಭಾರತದಲ್ಲಿ ಸಹಕಾರ ಚಳುವಳಿಯನ್ನು ಕ್ರಾಂತಿಗೊಳಿಸುವ ಉದ್ದೇಶ ಹೊಂದಿದೆ. ಅವುಗಳು ಪರಿಪೂರ್ಣವಾಗಬೇಕಾದರೆ ಶಾ ಅವರ ನಾಯಕತ್ವದ ಅವಶ್ಯವಿದೆ ಎಂದು ಅವರು ತಿಳಿಸಿದ್ದಾರೆ.

## ವಿಧಾನ ಪರಿಷತ್ತಿಗೆ ಆಯ್ಕೆಯಾದ ಸದಸ್ಯರುಗಳು



ಎಸ್.ಎನ್. ಬೋಸರಾಜು
ಕಾಂಗ್ರೆಸ್



ವಸಂತಕುಮಾರ್
ಕಾಂಗ್ರೆಸ್



ಡಾ। ಯತೀಂದ್ರ ಸಿದ್ದರಾಮಯ್ಯ
ಕಾಂಗ್ರೆಸ್



ಕೆ. ಗೋವಿಂದರಾಜು
ಕಾಂಗ್ರೆಸ್



ಐವಾನ್ ಡಿಸೋಜ
ಕಾಂಗ್ರೆಸ್



ಬಿಲ್ಕೀಸ್ ಬಾನೊ
ಕಾಂಗ್ರೆಸ್



ಜಗದೇವ ಗುತ್ತೇದಾರ್
ಕಾಂಗ್ರೆಸ್



ಸಿ.ಟಿ. ರವಿ
ಬಿಜೆಪಿ



ಎನ್. ರವಿಕುಮಾರ್
ಬಿಜೆಪಿ



ಎಂ.ಜಿ. ಮುಳೆ
ಬಿಜೆಪಿ



ಜವರಾಯಿಗೌಡ
ಜೆಡಿಎಸ್



ಎಸ್.ಎಲ್.
ಬೋಜೇಗೌಡ



ರಾಮೋಜಿಗೌಡ



ಡಿ.ಟಿ. ಶ್ರೀನಿವಾಸ್



ಕೆ. ವಿವೇಕಾನಂದ



ಚಂದ್ರಶೇಖರ
ಪಾಟೀಲ್



ಧನಂಜಯ್ ಸರ್ಜಿ

# ವಿಧಾನ ಪರಿಷತ್ತಿನಲ್ಲಿ ಸಹಕಾರಿಗಳಿಗೆ ಪ್ರಾತಿನಿಧ್ಯ ಸಿಗಬೇಕು
# ಪತ್ತಿನ ಸಹಕಾರ ಸಂಘಗಳ ಮಹಾಮಂಡಳದಲ್ಲಿ ಸಹಕಾರ ನ್ಯಾಯಾಲಯ ಸ್ಥಾಪನೆ ಅಗತ್ಯ
## ಅಧ್ಯಕ್ಷರಾದ ವಿ. ರಾಜು

ವಿ. ರಾಜು ಅವರು ಸಾಮಾಜಿಕ, ರಾಜಕೀಯ, ಸಹಕಾರ ಹಾಗೂ ಧಾರ್ಮಿಕ ಕ್ಷೇತ್ರ ಸೇರಿದಂತೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಕ್ರೀಯಾಶೀಲತೆಯಿಂದ ತೊಡಗಿಸಿಕೊಂಡಿದ್ದಾರೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ತಮ್ಮ ತಪೋನಿಷ್ಠ ಕಾಯಕ, ಕಾರ್ಯತತ್ಪರತೆಯ ಜೊತೆಗೆ ಸಮಾಜದ ವಿವಿಧ ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ತಮ್ಮ ವಿಶಿಷ್ಟಸೇವಾ, ಕ್ರಿಯಾಶೀಲ ಕಾರ್ಯವೈಖರಿಯಿಂದ ಜನಪರ ಕಾರ್ಯಕ್ರಮಗಳಿಂದ ಸಮಾಜಮುಖಿಯಾಗಿ, ಜನರ ನಡುವೆ ಬೆರೆತು ಜನಾನುರಾಗಿಯಾಗಿದ್ದಾರೆ. ಪತ್ರಿಕೋದ್ಯಮದಲ್ಲಿ "ವಾಸ್ತವವಾಣಿ" ಜಿಲ್ಲಾ ಕನ್ನಡ ದಿನಪತ್ರಿಕೆಯ ಪ್ರಧಾನ ಸಂಪಾದಕರಾಗಿ, "ಸಾಧುಶೆಟ್ಟಿ ವಾರ್ತೆ" ಮಾಸಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸೌರಭ, ಬೆಂಗಳೂರು ಮಾಸಪತ್ರಿಕೆಯ ಶಿವಮೊಗ್ಗ ಜಿಲ್ಲೆಯ ಗೌರವ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿ ಇವರ ಸೇವೆ ಸ್ಮರಣೀಯ. ಶಿವಮೊಗ್ಗ ಜಿಲ್ಲೆಯ ವಿವಿಧ ಸಹಕಾರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಪ್ರಸ್ತುತ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಾಹಾಮಂಡಳದ ಅಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಪತ್ತಿನ ಮಹಾಮಂಡಳದ ಸಂಸ್ಥಾಪಕ ನಿರ್ದೇಶಕರಾಗಿ, ಸಂಸ್ಥಾಪಕ ಉಪಾಧ್ಯಕ್ಷರಾಗಿ ಮಹಾಮಂಡಳದ ಬೆಳವಣಿಗೆಗೆ ಶ್ರಮಿಸುತ್ತಾ ಬಂದಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಇವರು ಸಲ್ಲಿಸಿದ್ದ ಸೇವೆಯನ್ನು ಗುರುತಿಸಿ ಸಹಕಾರ ಸಪ್ತಾಹ ಆಚರಣೆಯಲ್ಲಿ "ಅತ್ಯುತ್ತಮ ಸಹಕಾರಿ" ಪ್ರಶಸ್ತಿ ಹಾಗೂ 2022ರಲ್ಲಿ ಸಹಕಾರ ಕ್ಷೇತ್ರದ ಇವರ ಸೇವೆಗೆ ರಾಜ್ಯ ಸರ್ಕಾರದ ವತಿಯಿಂದ "ಸಹಕಾರ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕನ್ನಡ ಯುವಕ ಸಂಘದ ನಿರ್ದೇಶಕ, ಅಧ್ಯಕ್ಷರಾಗಿ, ಸೃಷ್ಠಿ ಸಾಂಸ್ಕೃತಿಕ ವೇದಿಕೆಯ ಸದಸ್ಯರಾಗಿ, ಶುಭ ಮಂಗಳ ಟ್ರಸ್ಟ್‌ನ ಉಪಾಧ್ಯಕ್ಷರಾಗಿ, ಶಿವಮೊಗ್ಗ ಜಿಲ್ಲೆಯ ಎಲ್ಲಾ ಸಾಹಿತ್ಯೋತ್ಸವ, ಯಕ್ಷೋತ್ಸವ, ಜನಪದ ಸಮ್ಮೇಳನ ಹೀಗೆ ಹಲವು ಪ್ರಾಕಾರಗಳ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಶಿವಮೊಗ್ಗ ಮೆಡಿಕಲ್ ಕಾಲೇಜಿನ ಸ್ಥಾಪನೆ ಮಾಡುವ ಕಾರ್ಯದಲ್ಲಿ ನಾಯಕತ್ವ ವಹಿಸಿ ಶಿವಮೊಗ್ಗ ಜಿಲ್ಲೆಗೆ ಮೆಡಿಕಲ್ ಕಾಲೇಜು ಸ್ಥಾಪನೆಗೆ ಕಾರಣಿಭೂತರಾಗಿದ್ದಾರೆ.




ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ 20ನೇ ವರ್ಷದ ಸಾರ್ಥಕ ಸೇವೆಯ ಹಿನ್ನೆಲೆಯಲ್ಲಿ ಅವರು ಪತ್ತಿನ ಮಹಾಮಂಡಳದ ಬೆಳವಣಿಗೆ, ಪತ್ತಿನ ವಲಯದ ಸಮಸ್ಯೆ ಹಾಗೂ ಪರಿಹಾರಗಳು ಸೇರಿದಂತೆ ರಾಜ್ಯದ ಸಮಗ್ರ ಸಹಕಾರ ಚಳವಳಿಯ ಕುರಿತು ಮಾತನಾಡಿದರು. ಪ್ರಮುಖವಾಗಿ ರಾಜ್ಯಸರ್ಕಾರ ಶಾಲಾ-ಕಾಲೇಜು ಪಠ್ಯಗಳಲ್ಲಿ ಸಹಕಾರ ವಿಷಯಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂಬುದು ಅವರ ಪ್ರಮುಖ ಆಶಯವೂ ಆಗಿದೆ.

- **ಪತ್ತಿನ ಮಹಾಮಂಡಳ ಪ್ರಾರಂಭವಾಗಿ 20 ವರ್ಷಗಳು ಪೂರೈಸಿದೆ. ಈ ಸಂದರ್ಭದಲ್ಲಿ ಮಹಾಮಂಡಳದ ಕಾರ್ಯಚಟುವಟಿಕೆ ಹಾಗೂ ಯೋಜನಾ ಕಾರ್ಯಗಳ ಕುರಿತು.**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ದಿವಂಗತ ಬಿ.ಎಲ್. ಲಕ್ಕೇಗೌಡರವರ ಕನಸಿನ ಕೂಸು. ಅವರ ನೇತೃತ್ವದಲ್ಲಿ ದಿನಾಂಕ : 06.11.2004 ರಂದು ಪ್ರಾರಂಭವಾಗಿ ಈ ವರ್ಷ 20 ವರ್ಷಗಳನ್ನು ಪೂರೈಸುತ್ತಿದೆ. 2004 ರಲ್ಲಿ ನಾನು ಸಹ ಮಹಾಮಂಡಳದ ಸ್ಥಾಪಕ ನಿರ್ದೇಶಕನಾಗಿ ಹಾಗೂ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಅಧ್ಯಕ್ಷನಾಗಿ ಸಂಸ್ಥೆಯ ಬೆಳವಣಿಗೆಗೆ ಮಾರ್ಗದರ್ಶನ ಮಾಡುತ್ತಿದ್ದೇನೆ. ಭಾರತದಲ್ಲಿ 1904ರಲ್ಲಿ ಪ್ರಾರಂಭವಾದ ಸಹಕಾರ ಆಂದೋಲನ 120 ವರ್ಷ ಪೂರೈಸಿದೆ. ದೇಶದಲ್ಲಿ 30 ಕೋಟಿಗೂ ಹೆಚ್ಚು ಸದಸ್ಯತ್ವ ಹೊಂದಿರುವ ಕ್ಷೇತ್ರವಾಗಿದೆ. "ಆಡು ಮುಟ್ಟದ ಸೊಪ್ಪಿಲ್ಲ, ಸಹಕಾರ ಕ್ಷೇತ್ರ ಮುಟ್ಟದ ಕ್ಷೇತ್ರವಿಲ್ಲ." ಅಂದಾಜು 8.50 ಲಕ್ಷ ವಿವಿಧ ರೀತಿಯ ಸಹಕಾರ ಸಂಘಗಳು ನಮ್ಮ ದೇಶದಲ್ಲಿವೆ. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಸೇವೆ ಅತ್ಯಂತ ದೊಡ್ಡದು. 4 ಟ್ರಿಲಿಯನ್ ಡಾಲರ್ ಆರ್ಥಿಕ ಅಭಿವೃದ್ಧಿಯ ಸಾಧನೆಯಾಗಿದೆ. ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪಾತ್ರ ಬಹಳ ಮುಖ್ಯವಾದದ್ದು. ಭಾರತದಲ್ಲಿ ಸಹಕಾರಿ ಕ್ಷೇತ್ರದಿಂದ 76 ಸಾವಿರ ಕೋಟಿ ಹಣ ಠೇವಣಿ ಇದೆ. 91% ಗ್ರಾಮಾಂತರ ಸಹಕಾರಿ ಕ್ಷೇತ್ರ ವ್ಯಾಪಿಸಿದೆ. ಕರ್ನಾಟಕದಲ್ಲಿ 40 ಲಕ್ಷ ಜನರು ಪತ್ತಿನ ಸಹಕಾರ ಕ್ಷೇತ್ರದಲ್ಲಿ, ಭಾರತದಲ್ಲಿ 13 ಕೋಟಿ ಜನರು ಪತ್ತಿನ ಚಳವಳಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಇಂತಹ ಬೃಹತ್ ವ್ಯವಸ್ಥೆಯೊಳಗೆ ಪತ್ತಿನ ಸಹಕಾರ ಸಂಘಗಳ ಗಮನಾರ್ಹವಾಗಿದ್ದು, ಅವುಗಳ ಕೊಡುಗೆ ಶ್ಲಾಘನೀಯವಾಗಿದೆ.

ಪತ್ತಿನ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಆದಾಯ ತೆರಿಗೆ ಹಾಗೂ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶಗಳಿಂದ ಈ ಮಹಾಮಂಡಳ ಸ್ಥಾಪನೆಯಾಯಿತು. ಅದರಂತೆ, ಮಹಾಮಂಡಳದ ಉಪನಿಯಮದ ರೀತ್ಯ ಪ್ರಾಥಮಿಕ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಮಹಾಮಂಡಳದಲ್ಲಿ ಆಜೀವ ಸದಸ್ಯತ್ವ/ ಅಜೀವ ಸಹ ಸದಸ್ಯ/ನಾಮಮಾತ್ರ ಸದಸ್ಯತ್ವ ಪಡೆದುಕೊಳ್ಳಲು ಅವಕಾಶವಿದೆ. ಇಲ್ಲಿಯವರೆಗೂ 2196 ಸಂಘಗಳು ಸದಸ್ಯತ್ವ ಪಡೆದಿವೆ. ಸದಸ್ಯ ಸಂಘಗಳಿಗೆ ಬಡ್ಡಿಯೇತರ ಆದಾಯವನ್ನು ಕಲ್ಪಿಸಿಕೊಡುವ ಸಲುವಾಗಿ, ಮಹಾಮಂಡಳವು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಜೊತೆ ಒಪ್ಪಂದ ಮಾಡಿಕೊಂಡು, ರಾಜ್ಯಾದಾದ್ಯಂತ 1854 ಇ–ಸ್ಟಾಂಪಿಂಗ್ ಕೇಂದ್ರಗಳಿಗೆ ಛಾಪಾ ಕಾಗದಗಳನ್ನು ಮುದ್ರಿಸಲು ಪರವಾನಗಿಗಳನ್ನು ಮಂಜೂರು ಮಾಡಿಸಿಕೊಟ್ಟಿದೆ.

ಮಹಾಮಂಡಳವು ರಾಜ್ಯದಲ್ಲಿನ ಸದಸ್ಯ ಸಂಘಗಳ ಆಡಳಿತಮಂಡಳಿ ಪದಾಧಿಕಾರಿಗಳಿಗೆ, ನಿರ್ದೇಶಕರುಗಳಿಗೆ, ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ, ಮಾರ್ಗದರ್ಶನ ನೀಡುವುದಲ್ಲದೇ, ಸಂಘಗಳ ಅಭಿವೃದ್ಧಿಗೆ ಅಗತ್ಯ ಶಿಕ್ಷಣ ತರಬೇತಿ ನೀಡುತ್ತಾ ಬಂದಿದೆ. ಹಿಂದಿನ ಆಡಳಿತ ಮಂಡಳಿ ಅಧ್ಯಕ್ಷರು, ನಿರ್ದೇಶಕರುಗಳ ಸಹಕಾರ ದೊಂದಿಗೆ ಮಹಾಮಂಡಳವು ಮಾಸಿಕ ಸಹಕಾರ ವಾರ್ತಾಪತ್ರಿಕೆಯನ್ನು ಹೊರತರುತ್ತಿದ್ದು ಪತ್ತಿನ ಸಹಕಾರ ಸಂಘಗಳಿಗೆ ಪ್ರಯೋಜನಕಾರಿಯಾದ ಸುತ್ತೋಲೆಗಳನ್ನು, ಆದೇಶಗಳನ್ನು ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸುತ್ತಿದೆ ಹಾಗೂ ಮಹಾಮಂಡಳದ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಮಾಹಿತಿ ನೀಡಲಾಗುತ್ತಿದೆ. ಮಹಾಮಂಡಳವು ಜೆ.ಬಿ.ಕಾವಲ್, ರಾಜೀವ್‌ಗಾಂಧಿನಗರ, ನಂದಿನಿ ಬಡಾವಣೆ ಬೆಂಗಳೂರು ಇಲ್ಲಿ ಖರೀದಿಸಿರುವ ನಿವೇಶನದಲ್ಲಿ ರೂ. ಮೂರು ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಾಲ್ಕು ಮಹಡಿಗಳ ಸುಸಜ್ಜಿತ ಕಟ್ಟಡ ನಿರ್ಮಿಸಿದೆ. ಹೀಗೆ ಮಹಾಮಂಡಳ ಹಲವಾರು ಕಾರ್ಯಚಟುವಟಿಕೆಗಳ ಮೂಲಕ ಉತ್ತಮ ಸೇವೆ ಸಲ್ಲಿಸುತ್ತಿದೆ.

- **ಪ್ಯಾಕ್ಸ್‌ಗಳ ಬಲವರ್ಧನೆಯಂತೆ ಪತ್ತಿನ ಸಹಕಾರ ಸಂಘಗಳ ಬಲವರ್ಧನೆ ಯೋಜನೆಗಳ ಅನುಷ್ಠಾನ ಸಾಧ್ಯವೇ? ಈ ಕುರಿತು.**

ಕರ್ನಾಟಕ ರಾಜ್ಯದಲ್ಲಿ 5000ಕ್ಕೂ ಹೆಚ್ಚು ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಮೂಲಕ ಅಬಲ ವರ್ಗದವರ ಆರ್ಥಿಕ ಶ್ರೇಯೊಭಿವೃದ್ಧಿ ಕೆಲಸಗಳು ನೆರವೇರುತ್ತಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪತ್ತಿನ ವಲಯದ ಬೆಳವಣಿಗೆಗೆ ವಿಶೇಷವಾದಂತಹ ಆದ್ಯತೆ ನೀಡಬೇಕು. ಗುಣಮಟ್ಟದ ಆಡಳಿತ, ತಂತ್ರಜ್ಞಾನಾಧಾರಿತ ಸೇವೆಗಳಿಗೆ ಇಂದು ಪ್ರತಿಯೊಂದು ಸಹಕಾರ ಸಂಸ್ಥೆಗಳು ತೆರೆದುಕೊಳ್ಳಬೇಕು. ವೃತ್ತಿಪರ ಆಡಳಿತ ಲೆಕ್ಕಪರಿಶೋಧನೆ, ಹೊಸ ಯೋಜನೆಗಳ ಅನುಷ್ಠಾನ, ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ತಾಲ್ಲೂಕು, ಜಿಲ್ಲಾವಾರು ಹಾಗೂ ವಿಭಾಗವಾರು ಗುಣಮಟ್ಟದ ಸೇವೆ ನೀಡುವಂತ ಸಹಕಾರ ಸಂಘಗಳು ಬೆಳೆಯಬೇಕು. ಈ ಕುರಿತು ಸಹಕಾರ ಭಾರತಿ ಮತ್ತು ವಿವಿಧ ರಾಜ್ಯಗಳ ಪತ್ತಿನ ಸಹಕಾರ ಮಹಾಮಂಡಳಗಳು ಹಾಗೂ ಸಹಕಾರ ಸಂಘಗಳ ಸಹಯೋಗದಲ್ಲಿ ಡಿಸೆಂಬರ್–2023ರಂದು ನವದೆಹಲಿಯಲ್ಲಿ ನಡೆದ ಪತ್ತಿನ ಸಹಕಾರ ಸಂಘಗಳ ಸಮಸ್ಯೆಗಳ ಕುರಿತ "ಚಲೋ ದಿಲ್ಲಿ" ರಾಷ್ಟ್ರೀಯ ಅಧಿವೇಶನದಲ್ಲಿ ಚರ್ಚಿಸಲಾಗಿದೆ. ಗುಜರಾತ್ ಸ್ಟೇಟ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟೀಸ್ ಫೆಡರೇಷನ್, ಅಹಮದಾಬಾದ್ ದ್ವಾರಕಾದಲ್ಲಿ ಇತ್ತೀಚೆಗೆ ರಾಜ್ಯ ಮಟ್ಟದ ಸಹಕಾರ ಪತ್ತಿನ ಸಹಕಾರ ಸಂಘಗಳ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಗುಜರಾತ್ ಕ್ರೆಡಿಟ್ ಫೆಡರೇಷನ್‌ನ ಅಧ್ಯಕ್ಷರು ಘನಶ್ಯಾಂ ಬಾಯಿ ಅಮೀನ, ಮಹಾರಾಷ್ಟ್ರ ರಾಜ್ಯ ಕ್ರೆಡಿಟ್ ಫೆಡರೇಷನ್‌ನ ಅಧ್ಯಕ್ಷರು ಕಾಕಾ ಸಾಹೇಬ್ ಕೋಯ್ತೆ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರುಗಳಾದ ಡಾ||ಸಂಜಯ ಪಿ ಹೊಸಮಠ, ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಹೆಚ್.ಟಿ.ನಾಗೇಶ್ ಮತ್ತಿತರರು ಭಾಗವಹಿಸಿ ಪತ್ತಿನ ಸಂಘಗಳ ಸಮಸ್ಯೆಗಳ ಕುರಿತು ಚರ್ಚಿಸಿದ್ದಾರೆ. ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಯ ದೃಷ್ಟಿಯಿಂದ ಇತರೆ ಸಹಕಾರ ಸಂಘಗಳಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳನ್ನು ಪತ್ತಿನ ಸಹಕಾರ ಸಂಘಗಳಿಗೂ ನೀಡಬೇಕು. ಪತ್ತಿನ ಸಹಕಾರ ಸಂಘಗಳಿಗೂ ಠೇವಣಿಗಳ ಮೇಲೆ ವಿಮೆ ಭದ್ರತೆ ನೀಡಿ ಅವುಗಳಿಗೆ ಒತ್ತಾಸೆಯಾಗಬೇಕು.

- **ಸಹಕಾರ ವಲಯ ಇಂದು ರಾಷ್ಟ್ರ ಹಾಗೂ ರಾಜ್ಯದ ಸರ್ವತೋಮುಖ ಬೆಳವಣಿಗೆಯಲ್ಲಿ ವಿಶೇಷ ಪಾತ್ರ ನಿರ್ವಹಿಸುತ್ತಿದೆ. ಆದರೂ ಈ ವಲಯಕ್ಕೆ ನಿರೀಕ್ಷಿತವಾದ ಪ್ರಚಾರ ದೊರೆಯುತ್ತಿಲ್ಲ ಈ ಬಗ್ಗೆ..**

ಜೀವನದ ಎಲ್ಲಾ ಆಯಾಮಗಳಿಗೂ ಸಹಕಾರ ವ್ಯವಸ್ಥೆ ಹರಡಿದೆ ಎಂದರೆ ತಪ್ಪಾಗಲಾರದು. ದೇಶದಲ್ಲಿ 8.5 ಲಕ್ಷ ಸಹಕಾರ ಸಂಘಗಳು ಅಸ್ತಿತ್ವದಲ್ಲಿವೆ. ಭಾರತದ ಆರ್ಥಿಕ ಅಭಿವೃದ್ದಿಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಅನನ್ಯ. ಭಾರತವು ಆರ್ಥಿಕ ಅಭಿವೃದ್ಧಿ ವಲಯದಲ್ಲಿ ಅಗ್ರ ಸ್ಥಾನದಲ್ಲಿದೆ. 5 ಟ್ರಿಲಿಯನ್ ಡಾಲರ್ ಆರ್ಥಿಕ ಅಭಿವೃದ್ದಿಗೆ ಸಾಧನೆಗೆ ಸಹಕಾರ ಕ್ಷೇತ್ರದ ಪಾತ್ರ ಬಹಳ ಮುಖ್ಯವಾದದ್ದು. ಭಾರತದಲ್ಲಿ ಪತ್ತಿನ ಸಹಕಾರಿ ಕ್ಷೇತ್ರದಿಂದ 76 ಸಾವಿರ ಕೋಟಿ ಹಣ ಠೇವಣಿ ಇದೆ. 91% ಗ್ರಾಮಾಂತರ ವಲಯಕ್ಕೆ ಸಹಕಾರಿ ಕ್ಷೇತ್ರ ವ್ಯಾಪಿಸಿದೆ. ಪತ್ತಿನ ಸಹಕಾರ ವಲಯ ಉದ್ಯೋಗವಕಾಶ ಸೃಷ್ಟಿಸುವಲ್ಲಿ ಹಾಗೂ ಉದ್ಯಮ ಸೃಷ್ಟಿಯಲ್ಲಿಯೂ ಮುಂಚೂಣಿಯಲ್ಲಿದೆ. ಆದರೆ ಅಗತ್ಯ ಪ್ರಚಾರ ಮಾಧ್ಯಮಗಳಿಂದ ದೊರಕುತ್ತಿಲ್ಲವಾದರೂ ಸಹಕಾರ ವಲಯದ ಸಂಸ್ಥೆಗಳನ್ನು ನಡೆಸುವ ನಿಯತಕಾಲಿಕೆಗಳಿಂದ ಪ್ರಚಾರ ನೀಡಲಾಗುತ್ತಿದೆ. ಸರ್ಕಾರಗಳು ಕಾಲಕಾಲಕ್ಕೆ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುವಂತೆ ನೆರವು ನೀಡುತ್ತಿದ್ದರೂ, ಕೆಲವೊಂದು ಸಹಕಾರ ಸಂಘಗಳ ವೈಫಲ್ಯಗಳನ್ನೇ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ನೀಡಲಾಗುತ್ತಿದೆ. ಸಹಕಾರ ಕ್ಷೇತ್ರದ ಸಾಧನೆಗಳ ಬಗ್ಗೆ ಪ್ರಚಾರದ ಅಗತ್ಯವಿದೆ.

- **ಸಹಕಾರಿ ನ್ಯಾಯಾಲಯದ ಅಗತ್ಯತೆ ಇದೆಯೇ?**

ಹೌದು, ರಾಜ್ಯದಲ್ಲಿ 5500 ಕ್ಕೂ ಹೆಚ್ಚು ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಹಕಾರ ಸಂಘಗಳಲ್ಲಿನ ವಿವಿಧ ರೀತಿಯ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ, ಸಹಕಾರ ಇಲಾಖೆಯ ಸುಪರ್ಧಿಯಲ್ಲಿರುವ ಸಹಕಾರಿ ನ್ಯಾಯಾಲಯವನ್ನು ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದಲ್ಲಿ ಸ್ಥಾಪಿಸಿದಲ್ಲಿ ವ್ಯಾಜ್ಯಗಳನ್ನು ಅತ್ಯಲ್ಪ ಅವಧಿಯಲ್ಲಿ ಬಗೆಹರಿಸಲು ಸಾಧ್ಯವಿದೆ. ಹಲವು ವರ್ಷಗಳಿಂದ ಸಹಕಾರಿ ನ್ಯಾಯಾಲಯ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬರಲಾಗಿದೆ.

- **ಸಹಕಾರ ವಲಯದ ಬಗ್ಗೆ ಸಂವಿಧಾನದಲ್ಲೂ ಉಲ್ಲೇಖಿಸಲಾಗಿದೆ. ಸಹಕಾರಿಗಳಿಗೆ ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ಸಿಗುತ್ತಿಲ್ಲ ಏಕೆ?**

ಸಂವಿಧಾನದಲ್ಲೂ ಸಹಕಾರ ಕ್ಷೇತ್ರದ ಬಗ್ಗೆ ಉಲ್ಲೇಖವಿದೆ. ವಿಧಾನ ಪರಿಷತ್ತಿನಲ್ಲಿ ಹಿರಿಯ ಸಹಕಾರಿಗಳನ್ನು ನಾಮನಿರ್ದೇಶನ ಮಾಡಲು ಅವಕಾಶವಿದೆ. ವಿಧಾನ ಪರಿಷತ್ತಿನಲ್ಲಿ ಶಿಕ್ಷಕರು, ಪದವೀಧರರ ಕ್ಷೇತ್ರಗಳಿಗೆ ಮೀಸಲಿರುವಂತೆ ಕಡ್ಡಾಯವಾಗಿ ಸಹಕಾರ ಕ್ಷೇತ್ರದ ಪ್ರಾತಿನಿಧ್ಯವನ್ನು ನೀಡಬೇಕೆಂದು ಮನವಿ ಮಾಡುತ್ತೇನೆ. ಈ ಬಗ್ಗೆ ರಾಜ್ಯದ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

- **ಪತ್ತಿನ ಸಹಕಾರ ವಲಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು...**

ಸಹಕಾರ ಸಂಸ್ಥೆಗಳು ಮೂಲತಃ ಸೇವೆಯನ್ನು ಗುರಿಯನ್ನಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಇಂತಹ ವ್ಯವಸ್ಥೆಯ ಮೇಲೆ ಆದಾಯ ತೆರಿಗೆ ಬಹುದೊಡ್ಡ ಸಮಸ್ಯೆಯಾಗಿತ್ತು. ಇದರಿಂದಾಗಿ ಸಂಸ್ಥೆಗಳ ಬೆಳವಣಿಗೆಯ ಮೇಲೆ ವ್ಯತಿರಿಕ್ತವಾದ ಪರಿಣಾಮ ಉಂಟಾಗಿತ್ತು. ಜತೆಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿದಾರರಿಗೆ ಇರುವ ವಿಮಾ ಭದ್ರತಾ ಯೋಜನೆಯನ್ನು ಸಹಕಾರ ಬ್ಯಾಂಕುಗಳಿಗೂ ಸಹ ಅನ್ವಯ ಮಾಡಬೇಕು. ಹಾಗೂ ಸಾಲ ವಸೂಲಾತಿ ಕ್ರಮದಲ್ಲಿ ಸ್ವಲ್ಪಮಟ್ಟದ ಬದಲಾವಣೆಯನ್ನು ತರಬೇಕಾದ ಅಗತ್ಯವಿದೆ.

- **ಸಹಕಾರ ಸಚಿವಾಲಯದ ಬಗ್ಗೆ**


ಸಹಕಾರ ವಲಯದ ಬೆಳವಣಿಗಾಗಿ ಪ್ರತ್ಯೇಕ ಸಚಿವಾಲಯದ ರಚನೆಯಾಗಿದೆ. ಭಾರತದಲ್ಲಿ ಸಹಕಾರ ಚಳವಳಿಯ ಇತಿಹಾಸದಲ್ಲಿ ಇದು ಒಂದು ಹೆಗ್ಗುರುತು. ಸಹಕಾರ ಸಚಿವಾಲಯವನ್ನು ಜುಲೈ 6, 2021 ರಂದು "ಸಹಕಾರದ ಮೂಲಕ ಸಮೃದ್ಧಿ" ಧ್ಯೇಯದೊಂದಿಗೆ ರಚಿಸಲಾಯಿತು. ನಂತರ ರಾಷ್ಟ್ರದ, ರಾಜ್ಯದ ಸಹಕಾರ ಚಳವಳಿಯಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಕಳೆದ 3 ವರ್ಷಗಳಿಂದ ಸಹಕಾರ ವ್ಯವಸ್ಥೆಗೆ ಹೊಸ ಆಯಾಮ ದೊರೆತಿದೆ. ಕೃಷಿ ಪತ್ತಿನ ಸಹಕಾರ ಸಂಘಗಳ ಬಲವರ್ಧನೆ ಮತ್ತು ಅವುಗಳನ್ನು ಬಹುಸೇವಾ ಕೇಂದ್ರಗಳಾಗಿ ಮಾರ್ಪಡಿಸಿರುವುದು ಗ್ರಾಮೀಣ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಸ್ವ–ಸಹಾಯ ಮತ್ತು ಸಹಕಾರದ ಮೂಲಕ ಸಮುದಾಯದ ಪ್ರಗತಿಗಾಗಿ, ಸಾಮಾಜಿಕ ಮತ್ತು ಆರ್ಥಿಕ ಬಂಡವಾಳವನ್ನು ಕ್ರೋಢೀಕರಿಸುವ ಮೂಲಕ ಸಹಕಾರ ವಲಯವು ಭಾರತೀಯ ಆರ್ಥಿಕತೆಯ ಅಸಾಧಾರಣ ವಲಯವಾಗಿ ಹೊರಹೊಮ್ಮಬಲ್ಲದು ಎಂಬ ಆಶಾಭಾವನೆಯನ್ನು ಮೂಡಿಸಿದೆ. ಹೀಗಾಗಿ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸಿದಲ್ಲಿ ಅದು ಇಡೀ ಸಹಕಾರ ವಲಯದ ಬಲವೃದ್ಧಿಗೆ ಪೋಷಕವಾಗಬಲ್ಲದು. ಪತ್ತಿನ ಸಹಕಾರ ಸಂಘಗಳೂ ಸಹ ಸಂಪೂರ್ಣ ಗಣಕೀಕರಣದತ್ತ, ವೃತ್ತಿಪರ ಆಡಳಿತದತ್ತ, ಸದಸ್ಯರ ಅಗತ್ಯಗಳನ್ನು ಸಕಾಲದಲ್ಲಿ ಪೂರೈಸುವತ್ತ ಗಮನಹರಿಸಬೇಕು. ರಾಜು ಅವರು ಸಂದರ್ಶನದುದ್ದಕ್ಕೂ ಪತ್ತಿನ ಸಹಕಾರ ವಲಯದ ಬಗ್ಗೆ ತಮಗಿರುವ ಕಾಳಜಿ, ಬದ್ಧತೆಯನ್ನು ವ್ಯಕ್ತ ಮಾಡುತ್ತಿದ್ದುದು ವಿಶೇಷವಾಗಿದ್ದಿತು.




ಪತ್ತಿನ ಮಹಾಮಂಡಳದ ಸಿಬ್ಬಂದಿಗಳೊಂದಿಗೆ ಅಧ್ಯಕ್ಷರಾದ ವಿ. ರಾಜು ರವರು

# ರಾಜ್ಯದ ಸಹಕಾರ ಆಂದೋಲನದ ಬೆಳವಣಿಗೆಗೆ ಯುವಜನರು, ಮಹಿಳೆಯರು ಭಾಗವಹಿಸುವಿಕೆ ಅತ್ಯಗತ್ಯ

## ಪತ್ತಿನ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ



**ಕೆ.ಕೆ. ಮಹೇಂದ್ರಪ್ರಸಾದ್‌ಗೌಡ ಅವರು ತಮ್ಮ ಕಿರಿ ವಯಸ್ಸಿನಿಂದಲೇ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು. ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವುದರ ಜೊತೆಗೆ ಸಾಮಾಜಿಕ ಚಿಂತನೆಗಳೊಂದಿಗೆ ಸಹಕಾರ ಕ್ಷೇತ್ರದಲ್ಲಿ ಕಳೆದ 2 ದಶಕಗಳಿಂದ ತೊಡಗಿಸಿಕೊಂಡು ಕ್ಷೇತ್ರದ ಬೆಳವಣಿಗೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಬೆಂಗಳೂರಿನ ಜನಹಿತ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡುವುದರ ಜೊತೆಗೆ ಕಳೆದ ಒಂದು ದಶಕದಿಂದ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾಗಿ, ಕಳೆದ 2 ವರ್ಷಗಳಿಂದ ಉಪಾಧ್ಯಕ್ಷರಾಗಿ ಉಪಯುಕ್ತ ಮಾರ್ಗದರ್ಶನ ಮಾಡುತ್ತಿದ್ದಾರೆ.**

**ಇತ್ತೀಚಿನ ವರ್ಷಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಯುವಜನರು ಮತ್ತು ಮಹಿಳೆಯರ ಭಾಗವಹಿಸುವಿಕೆ ಸಮಾಧಾನಕರವಾಗಿದೆ. ಮುಂದಿನ ತಲೆಮಾರುಗಳಿಗೆ ಸಹಕಾರ ಕ್ಷೇತ್ರವನ್ನು ಪರಿಣಾಮಕಾರಿಯಾಗಿ ಕೊಂಡೊಯ್ಯಲು ಅಧಿಕ ಸಂಖ್ಯೆಯಲ್ಲಿ ಯುವಜನರು ಮತ್ತು ಮಹಿಳೆಯರು ತೊಡಗಿಸಿಕೊಳ್ಳಬೇಕಾಗಿದೆ ಎಂಬುದು ಅವರ ಅಭಿಪ್ರಾಯ. ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಸ್ವಸಹಾಯ ಗುಂಪುಗಳ ಮೂಲಕ ಮಿತವ್ಯಯ ಹಾಗೂ ವಿವಿಧ ಉದ್ದೇಶಗಳಿಗೆ ಸಹಕಾರ ಸಂಸ್ಥೆಗಳಿಂದ ಸಾಲ ಪಡೆದು ಗುಡಿ ಕೈಗಾರಿಕೆ ಹಾಗೂ ಇತರೆ ವ್ಯಾಪಾರಾಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಇದರಿಂದ ಸಹಕಾರ ಚಳವಳಿ ಗ್ರಾಮಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗಲಿದೆ ಎಂಬುದು ಕೆ.ಕೆ. ಮಹೇಂದ್ರಪ್ರಸಾದ್‌ಗೌಡ ಅವರ ಅನುಭವದ ಮಾತುಗಳು.**

- **ಸಹಕಾರಾಭಿವೃದ್ಧಿಗೆ ಅಗತ್ಯವಾದ ಸಹಕಾರಿ ಶಿಕ್ಷಣ – ತರಬೇತಿ – ಪ್ರಚಾರದ ಬಗ್ಗೆ ತಮ್ಮ ಸಲಹೆಗಳು...**

ಸಹಕಾರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಹಕಾರ ಶಿಕ್ಷಣ – ತರಬೇತಿ ಅತ್ಯಂತ ಅವಶ್ಯವೆಂದು ಭಾವಿಸಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವನ್ನು ಸ್ಥಾಪಿಸಿದ್ದು, ಮಹಾಮಂಡಳವು ತನ್ನ ಧ್ಯೇಯೋದ್ದೇಶಗಳನ್ನು ನಿರಂತರವಾಗಿ, ಪರಿಣಾಮಕಾರಿಯಾಗಿ ಈಡೇರಿಸುತ್ತಾ ಬಂದಿದೆ. ಅದರಂತೆಯೇ ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸಲು ಅಗತ್ಯ ಮಾರ್ಗದರ್ಶಕ ಸಂಸ್ಥೆಯಾಗಿ ಕಳೆದ 20 ವರ್ಷಗಳ ಹಿಂದೆ ಸಮಾನ ಮನಸ್ಕ ಸಹಕಾರಿಗಳ ಒಮ್ಮತದಿಂದ ಹಿರಿಯ ಸಹಕಾರಿ ಬಿ.ಎಲ್. ಲಕ್ಕೇಗೌಡ ಅವರ ನೇತೃತ್ವದಲ್ಲಿ ಸಮಾನ ಮನಸ್ಕ ಸಹಕಾರಿಗಳು ಸೇರಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವನ್ನು ಆರಂಭಿಸಿದರು. ಅಂದು ಹಾಕಿಕೊಟ್ಟ ಬುನಾದಿ ಇಂದು ಈ ಪತ್ತಿನ ಸಹಕಾರ ಮಹಾಮಂಡಳವು ನಿರಂತರವಾಗಿ ಬದ್ಧತೆಯುಳ್ಳ ಸೇವೆಯನ್ನು ನೀಡುತ್ತ ಬಂದಿದೆ.

ಪತ್ತಿನ ಮಹಾಮಂಡಳದ ಸದಸ್ಯ ಸಂಸ್ಥೆಗಳು ಪತ್ತೇತರ ಆದಾಯವನ್ನು ಗಳಿಸುವ ಉದ್ದೇಶದಿಂದ ಇ–ಸ್ಟಾಂಪಿಂಗ್‌ನ ರಾಜ್ಯ ನೋಡಲ್ ಏಜೆನ್ಸಿಯಾಗಿ ಮಹಾಮಂಡಳವು ಕಾರ್ಯನಿರ್ವಹಿಸುವ ಮೂಲಕ ಸಂಘಗಳ ಅಧಿಕ ಆದಾಯ ವೃದ್ಧಿಗೆ ನೆರವಾಗುತ್ತಿದೆ. ಸಹಕಾರಿ ಚಳವಳಿ ಜನರ ಚಳವಳಿಯಾಗಿದ್ದು, ಈ ವ್ಯವಸ್ಥೆಯಲ್ಲಿನ ವ್ಯವಹಾರ, ಸಾಧನೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಮುಟ್ಟಿಸಲು ಸಹಕಾರ ತತ್ವ ಆಚರಣೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರ ಮಾಸಿಕ ವಾರ್ತಾಪತ್ರಿಕೆಯ ಮೂಲಕ, ಇತರ ಪ್ರಕಟಣೆಗಳ ಮೂಲಕ ಪ್ರಚಾರ ಕೆಲಸಗಳನ್ನು ಪತ್ತಿನ ಮಹಾಮಂಡಳ ಮಾಡುತ್ತಾ ಬಂದಿದೆ.

ಪತ್ತಿನ ಸಹಕಾರ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳಲ್ಲಿ ಸಿಬ್ಬಂದಿಗಳು ಕಾರ್ಯದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ರಾಜ್ಯದಾದ್ಯಂತ ವಿಭಾಗವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ, ತಜ್ಞ ಉಪನ್ಯಾಸಕರುಗಳಿಂದ ಪ್ರಚಲಿತ ಸಹಕಾರಿ ವಿದ್ಯಮಾನಗಳು ಮತ್ತು ಸಹಕಾರಿ ಕಾಯಿದೆ, ನಿಯಮಗಳ ಕುರಿತು ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡುತ್ತಾ ಪತ್ತಿನ ಸಂಘಗಳ ಮಾರ್ಗದರ್ಶಕ ಸಂಸ್ಥೆಯಾಗಿ ಅವರುಗಳ ಬಲವರ್ಧನೆಗೆ ಕಾರ್ಯನಿರ್ವಹಿಸುತ್ತಿದೆ.

- **ಯುವಜನರು, ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಸಹಕಾರಿ ವ್ಯವಸ್ಥೆಯಡಿ ಬರಲು ಅಗತ್ಯ ಕಾರ್ಯಕ್ರಮಗಳು...**

ಸಹಕಾರಾಭಿವೃದ್ಧಿಗೆ ಮಹಿಳೆಯರು, ಯುವಜನರು ಮಹತ್ವದ ಕೊಡುಗೆ ನೀಡಬಲ್ಲರು ಎಂಬುದು ನನ್ನ ಅಭಿಪ್ರಾಯ. ಇತ್ತೀಚಿನ

## ಸಿದ್ದಗಂಗಾ ರಾಷ್ಟ್ರೀಯ ರತ್ನ ಪುರಸ್ಕಾರ




ಬೆಂಗಳೂರಿನ ಬಸವಶ್ರೀ ಫೌಂಡೇಶನ್ ವತಿಯಿಂದ ಪತ್ತಿನ ಮಹಾಮಂಡಳದ ನಿರ್ದೇಶಕರು ಹಾಗೂ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರು ಆಗಿರುವ ಶ್ರೀ ಚಿತ್ತರಂಜನ್ ಬೋಳಾರ್ ರವರಿಗೆ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ವಿಶೇಷ ಸೇವೆಯನ್ನು ಪರಿಗಣಿಸಿ ಸಿದ್ದಗಂಗಾ ರಾಷ್ಟ್ರೀಯ ರತ್ನ ಪುರಸ್ಕಾರ ನೀಡಿ ಗೌರವಿಸಲಾಗಿದೆ.

ದಿನಗಳಲ್ಲಿ ಮಹಿಳೆಯರು ವಿಶೇಷವಾಗಿ ಪತ್ತಿನ ಸಹಕಾರ ಸಂಘಗಳಲ್ಲಿ, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಕ್ರಿಯರಾಗಿದ್ದಾರೆ. ಮಹಿಳೆಯರು ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ನೆರವು ಪಡೆದು ಹೈನುಗಾರಿಕೆ, ಗುಡಿ ಕೈಗಾರಿಕೆ, ಕಿರು ಉದ್ಯಮಗಳು ಸೇರಿದಂತೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಮೂಲಕ ಕುಟುಂಬದ ನಿರ್ವಹಣೆ, ವ್ಯವಸಾಯದ ಖರ್ಚುಗಳನ್ನು ಭರಿಸುವ ಶಕ್ತಿಯನ್ನು ಹೊಂದಿದ್ದಾರೆ. ಮಹಿಳೆಯರು ಸ್ವಸಹಾಯ ಗುಂಪುಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕವು ರಾಜ್ಯದಲ್ಲಿ ಕ್ರಾಂತಿಯನ್ನು ಉಂಟು ಮಾಡಿದ್ದಾರೆ. ಇದೊಂದು ದಾಖಲೆಯು ಹೌದು.

ಹಾಗೆಯೇ, ರಾಜ್ಯದಲ್ಲಿ ಮಹಿಳಾ ಪತ್ತಿನ ಸಹಕಾರ ಸಂಘಗಳು ಮತ್ತು ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಯಶಸ್ವಿಯಾಗಿ ನಡೆಸುತ್ತಿರುವ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆಯರನ್ನು ಸಹಕಾರ ಸಂಘ ಸಂಸ್ಥೆಗಳಲ್ಲಿ, ಸ್ವಸಹಾಯ ಗುಂಪುಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿ ಅವರನ್ನು ಆರ್ಥಿಕವಾಗಿ ಮತ್ತಷ್ಟು ಸ್ವಾವಲಂಬನೆ ಸಾಧಿಸುವಂತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಪತ್ತಿನ ಮಹಾಮಂಡಳದ ವತಿಯಿಂದ ಪತ್ತಿನ ಸಂಘಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಶಿಕ್ಷಣ, ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

- **ಸಹಕಾರ ಸಂಸ್ಥೆಗಳ ಬೆಳವಣಿಗೆಯಲ್ಲಿ ಸಂಶೋಧನೆ ಮತ್ತು ಮೌಲ್ಯಮಾಪನದ ಅಗತ್ಯದ ಕುರಿತು...**

ದೇಶದ ಸಹಕಾರ ಚಳವಳಿಗೆ 120 ವರ್ಷಗಳ ಇತಿಹಾಸವಿದೆ. ದೇಶದಲ್ಲಿ 8.5 ಲಕ್ಷಕ್ಕೂ ಅಧಿಕ ಸಹಕಾರ ಸಂಘ ಸಂಸ್ಥೆಗಳಿವೆ. ದೇಶದಲ್ಲಿ 60 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಇರುವುದು ಹೆಮ್ಮೆಯ ವಿಚಾರವಾಗಿದೆ. ಕರ್ನಾಟಕದಲ್ಲಿ 5 ಸಾವಿರಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಸೇರಿದಂತೆ ಅಂದಾಜು 46 ಸಾವಿರಕ್ಕೂ ಅಧಿಕ ಸಹಕಾರ ಸಂಘ ಸಂಸ್ಥೆಗಳಿವೆ.

ಈ ಸಂಸ್ಥೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಹೆಚ್ಚಾಗಿವೆ. ಉಳಿದ ಸಂಸ್ಥೆಗಳು ಹಲವು ಕಾರಣಗಳಿಂದ ಹಿಂದುಳಿದಿವೆ. ಇಂತಹ ಸಂಸ್ಥೆಗಳನ್ನು ಪುನಃಶ್ಚೇತನಗೊಳಿಸಿ, ಲಾಭದಲ್ಲಿ ಮುನ್ನಡೆಸುವುದರ ಜೊತೆಗೆ ಸಹಕಾರಿಗಳಿಗೆ ಹಾಗೂ ಸದಸ್ಯರಿಗೆ ಉತ್ತಮ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವುದರ ಜತೆಗೆ ಸಹಕಾರಿ ವ್ಯವಸ್ಥೆ ಸದೃಢವಾಗಿ ಬೆಳೆಯಲು ಸಂಶೋಧನೆ ಮತ್ತು ಮೌಲ್ಯಮಾಪನ ಆಗಾಗ್ಗೆ ನಡೆಯುತ್ತಿರಬೇಕು.

ಪತ್ತಿನ ಸಹಕಾರ ಮಹಾಮಂಡಳವು ಮುಂಬರುವ ದಿನಗಳಲ್ಲಿ ಈ ಬಗ್ಗೆ ಹೆಚ್ಚಿನ ಒತ್ತು ನೀಡಲು ಚಿಂತಿಸುತ್ತಿದೆ. ಎರಡು ದಶಕಗಳ ಸುದೀರ್ಘ ಸೇವೆ ಸಲ್ಲಿಸಿರುವ ಪತ್ತಿನ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾಗಿ, ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗೆ ಕಂಕಣತೊಟ್ಟು ಮಾತನಾಡಿದ ಮಹೇಂದ್ರ ಪ್ರಸಾದ್ ಅವರು ಸಮಗ್ರ ಸಹಕಾರ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುವ ಕುರಿತು ತುಂಬು ಕಳಕಳಿಯಿಂದ ಮಾತನಾಡಿದರು.



# ಜುಲೈ 6 : ಅಂತಾರಾಷ್ಟ್ರೀಯ ಸಹಕಾರ ದಿನ

▶▶ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.)

ಜುಲೈ 6, 2024 ರಂದು ವಿಶ್ವದಾದ್ಯಂತ ಸಹಕಾರಿಗಳು ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ ಅಂಗವಾಗಿ "ಸಹಕಾರಿ ಸಂಸ್ಥೆಗಳು ಎಲ್ಲರಿಗೂ ಉತ್ತಮ ಭವಿಷ್ಯವನ್ನು ನಿರ್ಮಿಸಿ" ಎಂಬ ಧ್ಯೇಯದೊಂದಿಗೆ ಆಚರಿಸಲಾಗುತ್ತಿದೆ. ಸಹಕಾರ ಸಂಸ್ಥೆಗಳಿಗೆ ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ಈ ವೇದಿಕೆಯು ಪರಿಣಾಮಕಾರಿ ಪಾತ್ರ ವಹಿಸಲಿದೆ. 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನಗಳಿಗೆ ಸಕ್ರಿಯರಾಗುವುದರ ಮೂಲಕ "ಉತ್ತಮ ನಾಳೆಗಾಗಿ" ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈಗಾಗಲೇ ಸಹಕಾರ ಸಂಸ್ಥೆಗಳು ಅಂತರ್ಗತ ಮತ್ತು ಸುಸ್ಥಿರ ಬೆಳವಣಿಗೆಗಾಗಿ ಉತ್ತಮ ಗುಣಮಟ್ಟದ ಸೇವೆಗಳನ್ನು ವಿಸ್ತರಿಸುವುದರ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ಆಡಳಿತ ಮತ್ತು ಹಂಚಿಕೆಯ ಮಾಲಿಕತ್ವದ ಜೊತೆಗೆ ಶಾಂತಿಪಾಲನೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಮಾದರಿಯಾಗಿವೆ. ಯುವ ಸಹಕಾರಿಗಳು ಮತ್ತು ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಭಾಗವಹಿಸಲು ಉತ್ತೇಜನ ನೀಡುವುದು, ಎಲ್ಲರಿಗೂ ವೈವಿಧ್ಯತೆ, ಸಮಾನತೆ ನೀಡುವ ಸಂಸ್ಥೆಗಳಾಗಿ ಸಾಮಾಜಿಕ – ಆರ್ಥಿಕ ಸಂಸ್ಥೆಗಳಾಗಿ ಪರಿಣಾಮಕಾರಿ ಸೇವೆ ಸಲ್ಲಿಸುತ್ತಿವೆ. ವಿಶ್ವದ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟುಗಳ ನಡುವೆಯೂ ಸಹಕಾರಿ ಸಂಸ್ಥೆಗಳು ದೃಢತೆಯೊಂದಿಗೆ ಕಾರ್ಯನಿರ್ವಹಿಸಿರುವುದು ಶ್ಲಾಘನೀಯ ವಿಚಾರವಾಗಿದೆ. 2024ರ ಅಂತಾರಾಷ್ಟ್ರೀಯ ಸಹಕಾರ ವರ್ಷವು ವಿಶ್ವದ 102ನೇ ಆಚರಣೆಯಾಗಿದೆ. ಜನರಲ್ಲಿ ಜಾಗೃತಿ ಮೂಡಿಸಿ, ಸಹಕಾರ ಕ್ಷೇತ್ರದಲ್ಲಿ ಲಭ್ಯವಿರುವ ಯೋಜನೆಗಳು, ಸೌಲಭ್ಯಗಳನ್ನು ಪಡೆದು ಸ್ವಾವಲಂಬಿ ಜೀವನ ನಡೆಸಲು ಸಹಕಾರ ಕ್ಷೇತ್ರ ಸಹಕಾರಿಯಾಗಿದೆ.




ವಿಶ್ವದಲ್ಲಿ ಸಹಕಾರ ಚಳವಳಿ ಉಗಮಗೊಂಡು ಎರಡು ಶತಮಾನದ ಸನಿಹದಲ್ಲಿದೆ. ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿ ಅಲ್ಲದೆ ಎಲ್ಲರನ್ನೂ ಒಳಗೊಳ್ಳುವ ಗುಣವಿಶೇಷ ಇರುವುದು 'ಸಹಕಾರ' ಮಾದರಿಯಲ್ಲಿ ಎಂಬುದು ಅತಿಶಯೋಕ್ತಿಯಲ್ಲ. 'ಹನಿ ಹನಿ ಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ' ಎಂಬ ನಾಣ್ನುಡಿ ಸೃಷ್ಟಿಯಾಗಿರುವುದೇ 'ಸಹಕಾರ' ಪದ್ಧತಿಯ ಅನುಸರಣೆಯಿಂದ, 'ಇವನಾರವ ಇವನಾರವ ಎಂದೆನಿಸದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ' ಎಂದ ಬಸವಣ್ಣನವರ ಉಕ್ತಿ ಇದನ್ನೇ ಧ್ವನಿಸುತ್ತದೆ. ಅಲ್ಲದೆ 'ಕಾಗೆಯೊಂದ ಅಗಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವ' ಎಂಬ ವಚನ ಸಹಕಾರ ತತ್ವಗಳ ಸಾರವನ್ನು ಸಾರುತ್ತದೆ.

ಈ 'ಸಹಕಾರ ಪದ್ಧತಿ' ಮಾನವನ ಹುಟ್ಟಿನಿಂದಲೇ ಆರಂಭ ಗೊಂಡರೂ' ಒಬ್ಬ ಮನುಷ್ಯ ಸಾಧನೆ ಮಾಡಲಾಗದ್ದನ್ನು ಹತ್ತು ಜನ ಸೇರಿ ಮಾಡಬಹುದು."ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' 'ಸ್ವಯಂ ಸಹಾಯ ಮತ್ತು ಪರಸ್ಪರ ಸಹಾಯ' ಎಂಬ ತತ್ವಗಳ ಆಧಾರದ ಮೇರೆಗೆ ಮಾನವ ತನ್ನ ಕನಿಷ್ಠ ಅಗತ್ಯತೆಯ ಪೂರೈಕೆ, ಅಲ್ಲದೆ, ಆರ್ಥಿಕ ಸಶಕ್ತತೆ ಪಡೆಯಲು ಆರಂಭಗೊಂಡಿದ್ದು ಯುರೋಪ್ ಖಂಡದಲ್ಲಿ. ಈ ದಿಸೆಯಲ್ಲಿ ಆಲೋಚಿಸಿದ ಮತ್ತು ಕಾರ್ಯಗತಗೊಳಿಸಲು ಯತ್ನಿಸಿದ ಪ್ರಯತ್ನ ರಾಬರ್ಟ್ ಓವನ್ (1771–1858) ಅವರದು, ಆದುದರಿಂದ ಅವರನ್ನು ಸಹಕಾರ ಪಿತಾಮಹ ಎಂದು ಕರೆಯಲಾಗುತ್ತದೆ. ಅಂದಿನಿಂದ ಇಂದಿನವರೆಗೂ ಈ ಅವಿರತ ಪ್ರಯತ್ನ ನಡೆಯುತ್ತಲೇ ಬಂದಿದೆ. ಮಾನವ ಜನಾಂಗದ ಒಳಿತಿಗೆ ಇದರಿಂದ ಆಗಿರುವ, ಆಗಲಿರುವ ಪರಿಣಾಮಗಳ ವಿಶ್ಲೇಷಣೆ, 21ನೇ ಶತಮಾನದ ಈ ಆಧುನಿಕ ಜಗತ್ತಿನಲ್ಲಿ ಇದರ ಪ್ರಸ್ತುತತೆ ಬಗ್ಗೆ ಚಿಂತನ–ಮಂಥನ, ವಿಶ್ಲೇಷಣೆ 2024ನೇ ಇಸವಿ 06ನೇ ಜುಲೈ ತಿಂಗಳಲ್ಲಿ ನಡೆಸಬೇಕಾಗಿರುವುದು ಸಹಕಾರಿಗಳ ಮುಂದಿರುವ ಸವಾಲು. ಈ ಅಂತಾರಾಷ್ಟ್ರೀಯ ಸಹಕಾರ ದಿನವು 102ನೇ ಆಚರಣೆಯಾಗಿರುತ್ತದೆ. ಆದರೂ ಇದಕ್ಕೆ ವಿಶ್ವ ಸಂಸ್ಥೆ ಮುನ್ನಡೆ ದೊರೆತದ್ದು 1992ರಲ್ಲಿ, ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತಾರಾಷ್ಟ್ರೀಯ ಸಹಕಾರ ದಿನವೆಂದು ಆಚರಿಸಲಾಗುತ್ತದೆ. ಇದರಿಂದಾಗಿ ಸಹಕಾರದ ಬಗ್ಗೆ ಸರ್ಕಾರಗಳ, ನಾಗರಿಕ ಸಮಾಜ ಸಂಸ್ಥೆಗಳ ಮತ್ತು ಮಿಗಿಲಾಗಿ ಸಾರ್ವಜನಿಕರ ಗಮನ ಸೆಳೆಯಲು ಸಾಧ್ಯವಾಗಿದೆ. ಈ ದಿಸೆಯಲ್ಲಿ ವಿಶ್ವದ ಸಹಕಾರ ಜಾಲದ ಶೃಂಗ ಸಂಸ್ಥೆಯಾದ 'ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ' ಯು ಈ ವರ್ಷದ ಘೋಷ ವಾಕ್ಯವನ್ನು ಈ ರೀತಿ ಹೊರಡಿಸಿದೆ."ಸರ್ವರಿಗೂ ಉತ್ತಮಭವಿಷ್ಯವನ್ನು ಸಹಕಾರ ಸಂಸ್ಥೆಗಳು ನಿರ್ಮಿಸುತ್ತವೆ." ಇದು ಹೇಗೆ? ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ವಿಶ್ವದಲ್ಲಿ ಒಟ್ಟು 3 ದಶಲಕ್ಷ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು 280 ದಶಲಕ್ಷ ಅಂದರೆ ಸರಿ ಸುಮಾರು ಶೇ.12 ಮಾನವ ಜನಾಂಗದ ಜೀವನದ ದಾರಿಯಾಗಿದೆ. ಭಾರತದಲ್ಲಿ 8.5ಲಕ್ಷ ಸಹಕಾರ ಸಂಘಗಳಿದ್ದು 40 ಕೋಟಿ ಸದಸ್ಯರಿರುತ್ತಾರೆ. ಕರ್ನಾಟಕದಲ್ಲಿ 44024 ಸಹಕಾರ ಸಂಘಗಳಿದ್ದು 32 ಕೋಟಿ ಸದಸ್ಯತ್ವ ಹೊಂದಿದೆ ಎಂದು ಅಂಕಿಅಂಶಗಳು ತಿಳಿಸುತ್ತವೆ.

ವಿಶ್ವದ ಮೊದಲ 300 ಅತಿ ಹೆಚ್ಚಿನ ವಹಿವಾಟು ನಡೆಸುವ ಸಹಕಾರ ಸಂಘಗಳಲ್ಲಿ ಫ್ರಾನ್ಸ್‌ನ 'ಕ್ರೆಡಿಟ್ ಅಗ್ರಿಕೋಲ್' 117.01 ಅಮೆರಿಕನ್ ಡಾಲರ್, ಜರ್ಮನ್‌ನ 'ರೆವೆ' (REWE) (ಗ್ರಾಹಕ ಸಹಕಾರ ಸಂಘ)

82.03 ಅಮೇರಿಕನ್ ಡಾಲರ್ ವ್ಯವಹಾರ ನಡೆಸುತ್ತಿದ್ದು ಅಗ್ರ ಸ್ಥಾನದಲ್ಲಿವೆ. ಇದರಲ್ಲಿ ಅಮೆರಿಕೆಯ 73, ಫ್ರಾನ್ಸ್‌ನ 40, ಜರ್ಮನಿಯ 31, ಜಪಾನ್‌ನ 21 ಸಂಸ್ಥೆಗಳಿವೆ. ಭಾರತದ ಎರಡು ಸಂಸ್ಥೆಗಳು ಇಫ್ಕೋ ಮತ್ತು 'ಅಮುಲ್' ಇದರಲ್ಲಿ ಸ್ಥಾನ ಪಡೆದಿವೆ ಎಂಬುದು ಸಮಾಧಾನಕರ ಸಂಗತಿ. ಮೇಲಿನ ಅಂಕಿ ಅಂಶಗಳು ಯುರೋಪ್ ಖಂಡದಲ್ಲಿ ಸಹಕಾರ ಚಳುವಳಿಯ ಮಹತ್ವವನ್ನು ಅರಿಯಬಹುದು. ಭಾರತದಲ್ಲಿ ಆರ್ಥಿಕ ಬೆಳವಣಿಗೆಗೆ ಹೋಲಿಸಿದರೆ ಪರಿಣಾಮಕಾರಿ ಸಾಧನೆ ಆಗಿದೆ ಎಂಬ ತೃಪ್ತಿ ದೊರೆಯುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಆರಂಭಗೊಂಡ ನಂತರ ನೂತನವಾಗಿ ಸಹಕಾರ ಮಾರಾಟ, ಕೃಷಿ ಉತ್ಪನ್ನಗಳ ರಫ್ತು ಸಾವಯವ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ, ಬಿತ್ತನೆ ಬೀಜಗಳ ಉತ್ಪಾದನೆ ಸಹಕಾರ ಸಂಘಗಳ ಸ್ಥಾಪನೆಗೆ ಆಯೋಜಿಸಲಾಗಿದ್ದು ಈಗಾಗಲೆ ಕಾರ್ಯಾರಂಭ ಮಾಡಿವೆ. ಅಲ್ಲದೆ ನ್ಯಾಫೆಡ್, ರಾಷ್ಟ್ರೀಯ ಗ್ರಾಹಕ ಮಹಾಮಂಡಳಗಳು ಈ ದಿಸೆಯಲ್ಲಿ ಸರ್ಕಾರಕ್ಕೆ, ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ, ನಬಾರ್ಡ್ ಸಹಯೋಗ ಸಹಾಯದಿಂದ ಸಹಕಾರದಿಂದ ಭಾರತದ ಸಹಕಾರ ವಲಯ ಜನಸಾಮಾನ್ಯರ ಜೀವನವನ್ನು ಹಸನು ಮಾಡಿದೆ. ಆದರೂ ಒಟ್ಟಾರೆ ಆರ್ಥಿಕತೆಯ ಪಾಲು ತೃಪ್ತಿದಾಯಕವಾಗಿಲ್ಲ. ಇದರಿಂದ ಬಂಡವಾಳಶಾಹಿ ಬಲವರ್ಧನೆಗೊಂಡು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗಿರುತ್ತದೆ. ಉತ್ತಮ ಸಮತಾ ಸಮಾಜ ನಿರ್ಮಾಣಕ್ಕಾಗಿ ಸಹಕಾರ ವಲಯ ಮತ್ತಷ್ಟು ಬೆಳೆಯಬೇಕಾದ ಅವಶ್ಯಕತೆ ನಿಚ್ಚಳವಾಗಿ ಕಂಡುಬರುತ್ತದೆ. ಅದಕ್ಕಾಗಿ ಅಂತಾರಾಷ್ಟ್ರೀಯ ಮೈತ್ರಿ ಸಂಸ್ಥೆಯು ಈ ಕೆಳಕಂಡ ಉಪಕ್ರಮಗಳನ್ನು ಶಿಫಾರಸ್ಸು ಮಾಡಿದೆ. ಅರಿವನ್ನು ವೃದ್ಧಿಸುವುದು; ಸಹಕಾರ ಸಂಘಗಳ ವೈವಿಧ್ಯತೆ ಮತ್ತು ಇದರಿಂದ ಜನರಿಗೆ ಆಗುವ ಉಪಯುಕ್ತತೆ ಬಗ್ಗೆ ತಿಳಿಸಿಕೊಡುವುದು. ವಿವಿಧ ಪ್ರದೇಶಗಳಲ್ಲಿ ವಿವಿಧ ವಲಯಗಳ ಪರಿಚಯ ಮಾಡಿಕೊಡುವುದು.

**ಯಶಸ್ಸನ್ನು ಸಂಭ್ರಮಿಸುವುದು :** ವಿವಿಧ ಪ್ರದೇಶಗಳ ವಿವಿಧ ಸಮುದಾಯಗಳು ಸಹಕಾರ ಸಂಘಗಳ ಯಶಸ್ವೀ ಕಾರ್ಯಾಚರಣೆಯಿಂದ ಪಡೆದಿರುವ ಪ್ರಯೋಜನಗಳು, ಲಾಭಗಳು, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ, ಸಾಧನೆ ಮತ್ತು ಅದರ ಪ್ರಭಾವಗಳನ್ನು ಅರಿತು ಸಂಭ್ರಮಿಸಿ ಇತರರಿಗೂ ಪ್ರೇರಣೆಯಾಗುವುದು. ಬೆಂಬಲ ನೀಡಲು ಒತ್ತಾಸೆ; ಸಹಕಾರ ಸಂಘಗಳ ಅಭಿವೃದ್ಧಿಗೆ ತಕ್ಕ ನೀತಿಗಳು ಮತ್ತು ಸಂಪನ್ಮೂಲ ಕ್ರೋಡಿಕರಣಕ್ಕೆ ತಕ್ಕ ಪರಿಸರ ನಿರ್ಮಾಣ ಮಾಡಿ ಭವಿಷ್ಯದಲ್ಲಿ ಸುಸ್ಥಿರ ಮತ್ತು ಸಮಾನತೆಯ ಸಮಾಜ ನಿರ್ಮಾಣ ಮಾಡುವುದು. ಸಹಯೋಗವನ್ನು ಬಲಪಡಿಸುವುದು; ಹೆಚ್ಚು ಪರಿಣಾಮಕಾರಿಯಾಗಲು ಮತ್ತು ಪ್ರಭಾವಶಾಲಿಯಾಗಿ ಕಾರ್ಯನಿರ್ವಹಿಸಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸರ್ಕಾರ ಸಂಸ್ಥೆಗಳೊಡನೆ, ಖಾಸಗಿ ಸಂಸ್ಥೆಗಳೊಡನೆ ಸಹಯೋಗ, ಸಹಭಾಗಿತ್ವದಿಂದ ಕಾರ್ಯನಿರ್ವಹಿಸುವುದರಿಂದ ಜನ ಸಾಮಾನ್ಯರ ಮೇಲೆ ಹೆಚ್ಚಿನ ಪ್ರಭಾವ ಬೀರುವುದಲ್ಲದೇ ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ. ಇದರೊಂದಿಗೆ ವಿವಿಧ ಸಹಕಾರ ಸಂಘಗಳು, ಶೃಂಗ ಸಹಕಾರ ಸಂಘಗಳು ಸಹಕಾರ ತತ್ವವಾದ 'ಸಹಕಾರ ಸಂಘಗಳ ನಡುವೆ ಸಹಕಾರ' ತಳಮಟ್ಟದ ಮತ್ತು ಶೃಂಗ ಶ್ರೇಣಿಗಳ ನಡುವೆ ಬಾಂಧವ್ಯ ವೃದ್ಧಿಯಿಂದ ಒಗ್ಗಟ್ಟು ಮತ್ತು 'ನಾವೆಲ್ಲ ಒಂದು' ಎಂಬ ಭಾವನೆಯಿಂದ ಕಾರ್ಯನಿರ್ವಹಿಸುವುದರಿಂದ ಸಹಕಾರ ಚಳುವಳಿಯನ್ನು ಬಲಪಡಿಸಬಹುದು. ಈ ದಿಸೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಅಂತಾರಾಷ್ಟ್ರೀಯ ಸಹಕಾರ ದಿನದಂದು ಆಲೋಚಿಸುವುದಕ್ಕೆ ಕರೆ ನೀಡಲಾಗಿದೆ.

**ಪ್ರೇರಣೆ ಮತ್ತು ನೈತಿಕ ಮೌಲ್ಯಗಳ ವೃದ್ಧಿ :** ಸಹಕಾರ ಸಂಘಗಳ ಯಶಸ್ಸನ್ನು ಸಂಭ್ರಮಿಸುವುದರಿಂದ ಸದಸ್ಯರಿಗೆ ಸಂಘದ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದಂತಾಗುತ್ತದೆ. ಇದರಿಂದ ಅವರು ಮತ್ತಷ್ಟು ಉತ್ಸಾಹದಿಂದ ಕಾರ್ಯೋನ್ಮುಖರಾಗಿ ಮುಂದಿನ ಭವಿಷ್ಯವನ್ನು ಮತ್ತೂ ಉತ್ತಮವಾಗಿ ರೂಪಿಸಬಲ್ಲರು. ಇದರಿಂದ ಅವರ ಭವಿಷ್ಯ ಉತ್ತಮವಾಗುವುದಲ್ಲದೆ ಸಮುದಾಯದ ಭವಿಷ್ಯವನ್ನು ಉತ್ತಮಗೊಳಿಸಬಲ್ಲರು. ಉದಾಹರಣೆಗೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅಧಿಕ ಮತ್ತು ಉತ್ತಮ ಗುಣಮಟ್ಟದ ಹಾಲು ಸರಬರಾಜು ಮಾಡಿದ ಸದಸ್ಯರನ್ನು, ಪತ್ತಿನ ಸಹಕಾರ ಸಂಘದಲ್ಲಿ ಸ್ವ ಪ್ರೇರಣೆಯಿಂದ ಸಕಾಲದಲ್ಲಿ ಸಾಲ ಮರುಪಾವತಿಸಿದವರನ್ನು ಸನ್ಮಾನಿಸುವುದು.

**ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು;** ಸಹಕಾರದಿಂದ ವ್ಯಕ್ತಿಗಳು ಉದ್ಯೋಗದಲ್ಲಿ ತೊಡಗಿಕೊಳುತ್ತಾರೆ ಮತ್ತು ಉದ್ಯೋಗ ಸೃಷ್ಟಿಸುತ್ತಾರೆ. ಇದರಿಂದ ಅದರಲ್ಲಿಯೂ ಸೇವೆ ಲಭ್ಯವಿಲ್ಲದ ವಲಯ ಮತ್ತು ಪ್ರದೇಶಗಳಲ್ಲಿ ಇದು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಪತ್ತಿನ ಸಹಕಾರ ವಲಯ ಬಂಡವಾಳ ಒದಗಿಸುತ್ತದೆ. ಉತ್ಪಾದನಾ ಮತ್ತು ಮಾರುಕಟ್ಟೆ ಸಹಕಾರ ಸಂಘಗಳು ಮಾರುಕಟ್ಟೆ ಒದಗಿಸುತ್ತವೆ.

**ಅರಿವು ಹೆಚ್ಚಿಸುವುದು :** ಸಹಕಾರ ಸಂಸ್ಥೆಗಳು ತಮ್ಮದೇ ಆದ ಸ್ವಯಂ ಸಂಸ್ಥೆಗಳು ಅನ್ನುವುದನ್ನು ಅರಿಯಬೇಕು . ಇದರಲ್ಲಿ ಮಧ್ಯಮ ವರ್ತಿಯ ಪಾತ್ರವಿಲ್ಲ ಇದರಿಂದ ಆಗುವ ಪ್ರಯೋಜನ ಮತ್ತು ಲಾಭ ತಮಗೆ ನೇರವಾಗಿ ದೊರೆಯುತ್ತಿದೆ ಎಂಬುದನ್ನು ತಿಳಿಸಿಕೊಡಬೇಕಾಗಿದೆ. ಸಾರ್ವಜನಿಕರಿಗೂ 'ಸಹಕಾರ'ದ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಇದರಿಂದಾಗುವ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ಪರಿಸರಾತ್ಮಕ ಸುಸ್ಥಿರತೆ ಬಗ್ಗೆ ತಿಳಿಯಪಡಿಸಲು ಕ್ರಮಗಳು ಅತ್ಯಗತ್ಯ ವಿಶ್ವದ ಸವಾಲುಗಳನ್ನು ಎದುರಿಸುವುದು (ಸರಿ ಪಡಿಸುವುದು); ಬಡತನ, ಹಸಿವು, ವಾತಾವರಣದ ಬದಲಾವಣೆ ಮತ್ತು ಅಸಮಾನತೆ ಸೃಷ್ಟಿಯಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಮತ್ತು ಅಸಮಾನತೆ ಯನ್ನು ತಡೆಗಟ್ಟುವುದರಲ್ಲಿ ಸಹಕಾರ ಸಂಘಗಳು ತೊಡಗಿಕೊಳ್ಳುವುದರಿಂದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

**ನೈತಿಕ ಮತ್ತು ಸುಸ್ಥಿರ ರೂಢಿಗಳನ್ನು ಉತ್ತೇಜಿಸುವುದು :** ಪ್ರಜಾಸತ್ತಾತ್ಮಕ ಆಡಳಿತವು ಎಲ್ಲರನ್ನೂ ಒಳಗೊಳ್ಳುವುದರಿಂದ ಸಮುದಾಯದ ಅಭಿವೃದ್ಧಿಗೆ ಕಾರಣವಾಗುತ್ತದೆ. ಆದುದರಿಂದ ಸಹಕಾರ ಸಂಘಗಳು ನೈತಿಕ ಮೌಲ್ಯಗಳನ್ನು ಹೆಚ್ಚಿಸುವ ಮತ್ತು ಪರಿಸರ ಜವಾಬ್ದಾರಿ ಯನ್ನು ವೃದ್ಧಿಸುವುದಕ್ಕೆ ಆದ್ಯತೆ ನೀಡಿ ಅಧಿಕ ಪ್ರಗತಿಗೆ ಕಾರಣವಾಗಬಲ್ಲ ಪರ್ಯಾಯ ಮಾರ್ಗವೆಂದರೆ ಸಹಕಾರ ಮಾರ್ಗ ಮಾತ್ರ ಆಗಿರುತ್ತದೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಸಹಕಾರ ಸಂಘಗಳ/ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸುವ ಕುರಿತು ನಿರ್ದೇಶನ ನೀಡುವ ಬಗ್ಗೆ.**

**ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಸಿಓ 34 ಸಿಎಲ್‌ಎಮ್ 2024 ದಿ: 21.3.2024**

**2) ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಚುನಾವಣೆ/ 139/2023–24, ದಿನಾಂಕ: 05.06.2024.**

### ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ 2024ರ ಹಿನ್ನೆಲೆಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಮಾರ್ಚ್ 2024 ರಿಂದ ದಿನಾಂಕ : 6.5.2024ರ ಅವಧಿಯಲ್ಲಿ ಆಡಳಿತ ಮಂಡಳಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಚುನಾವಣೆಗಳನ್ನು ಮುಂದೂಡಿ ಸಹಕಾರ ಸಂಘಗಳ ಮತ್ತು ಬ್ಯಾಂಕುಗಳ ಆಡಳಿತ ಮಂಡಳಿಯ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ 2024ರ ಹಿನ್ನೆಲೆಯಲ್ಲಿ ಜಾರಿಯಲ್ಲಿದ್ದ ಚುನಾವಣಾ ನೀತಿ ಸಂಹಿತೆ ದಿ: 06.06.2024 ರಂದು ಕೊನೆಗೊಳ್ಳಲಿರುವುದರಿಂದ ಸದರಿ ದಿನಾಂಕಕ್ಕೆ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಂಡಿರುವ/ ಮುಕ್ತಾಯಗೊಳ್ಳಲಿರುವ ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಆಡಳಿತ ಮಂಡಳಿಗಳ ಚುನಾವಣೆಗಳನ್ನು ನಡೆಸುವ ಕುರಿತು ನಿರ್ದೇಶನಗಳನ್ನು ನೀಡುವ ಸಂಬಂಧ ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯಂತೆ ಸಹಕಾರ ಸಂಘಗಳು ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಆಡಳಿತ ಮಂಡಳಿಗಳ ಚುನಾವಣೆಯನ್ನು ನಡೆಸಲು ನಿರ್ದೇಶನ ನೀಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಎ(4)(5), 28(ಬಿ), 29(ಎಫ್) (4), 30(1), 31 ಮತ್ತು 39(ಎ) ಗಳಿಗೆ ವಿನಾಯಿತಿ ನೀಡಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಓ 34 ಸಿಎಲ್‌ಎಮ್ 2024 ಬೆಂಗಳೂರು, ದಿನಾಂಕ: 05.06.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121 ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಎ(4)(5), 28(ಬಿ), 29(ಎಫ್) (4), 39(1), 31 ಮತ್ತು 39(ಎ) ಗಳಿಗೆ ವಿನಾಯಿತಿ ನೀಡಿ ದಿನಾಂಕ : 07.06.2024 ರಿಂದ ಅನ್ವಯಿಸುವಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿ ಆದೇಶಿಸಲಾಗಿದೆ.

1. ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ವೇಳಾಪಟ್ಟಿ ಪ್ರಕಟವಾದಂತಹ ಪ್ರಕರಣಗಳಲ್ಲಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿ ದಿನಾಂಕ : 21.3.2024ಕ್ಕೆ ಯಾವ ಹಂತದಲ್ಲಿ ನಿಂತುಹೋಗಿದೆಯೋ ಆ ಹಂತದಿಂದಲೇ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.
2. ದಿನಾಂಕ : 06.06.2024ಕ್ಕೆ ಇದ್ದಂತೆ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಂಡಿರುವ/ ಮುಕ್ತಾಯಗೊಳ್ಳುವ/ ಚುನಾವಣೆ ಬಾಕಿಯಿರುವ ಸಹಕಾರ ಸಂಘಗಳು/ ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಸಂಘದ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿ ರಚನೆಯಾಗುವವರೆಗೆ ಮುಂದುವರೆಯತಕ್ಕದ್ದು.
3. ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ವೇಳಾಪಟ್ಟಿ ಪ್ರಕಟವಾಗದೆ ಇರುವ ಎಲ್ಲಾ ಪ್ರಕರಣಗಳಲ್ಲಿ ಕರಡು ಅನರ್ಹ ಮತದಾರರ ಪಟ್ಟಿ ಪ್ರಕಟಿಸಲು 2023–24ನೇ ಸಾಲಿನ ಸಹಕಾರ ವರ್ಷವನ್ನು ಒಳಗೊಂಡಂತೆ ಪ್ರಕರಣ 20(2)(J-iv)(J-v) ರಲ್ಲಿಯ ಅವಕಾಶಗಳ ಷರತ್ತನ್ನು ಪೂರೈಸಿರುವ ಕುರಿತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ನಿಯಮ 13–ಡಿ, (2)(2–ಎ) ರಲ್ಲಿಯ ಅವಕಾಶಗಳಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಹೊಸದಾಗಿ ಅವಕಾಶ ನೀಡಿ ನೋಟೀಸು ನೀಡತಕ್ಕದ್ದು.
4. ಯಾವ ಸಂಘದ ಪ್ರಧಾನ ಉದ್ದೇಶವು ಸಾಲ ಮತ್ತು ಮುಂಗಡವನ್ನು ನೀಡುವುದಾಗಿದೆಯೋ ಅಂತಹ ಸಂಘಗಳು 2023–24ನೇ ಸಾಲಿನ ತಗಾದೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 20ರ ಉಪಪ್ರಕರಣ (2)ರ ಖಂಡ ©-iv ರಡಿ ಪರಿಗಣಿಸತಕ್ಕದ್ದು.
5. ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ನಿಯಮ 13–ಡಿ, (2)(2–ಎ) ರಂತೆ ಕ್ರಮವಿಟ್ಟು ಮತದಾರರ ಪಟ್ಟಿ ತಯಾರಿಸುವ ಪ್ರಕ್ರಿಯೆಯ ಅವಧಿಯಲ್ಲಿ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಂಡಲ್ಲಿ ಅಂತಹ ಸಹಕಾರ ಸಂಘಗಳು/

ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯು ಸದರಿ ಸಂಘಗಳಿಗೆ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿ ರಚನೆಯಾಗುವವರೆಗೆ ಮುಂದುವರೆಯತಕ್ಕದ್ದು.

6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಎ (5), 30(1) ಮತ್ತು ಪ್ರಕರಣ 31 ರಡಿಯಲ್ಲಿ ಸಂದರ್ಭಾನುಸಾರ ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ನೇಮಿಸಿರುವ ಪ್ರಕರಣಗಳಲ್ಲಿ ಚುನಾವಣೆ ಜರುಗಿ ಹೊಸ ಆಡಳಿತ ಮಂಡಳಿ ರಚನೆಯಾಗುವವರೆಗೂ ಆಡಳಿತಾಧಿಕಾರಿ/ ವಿಶೇಷಾಧಿಕಾರಿಗಳೇ ಮುಂದುವರೆಯತಕ್ಕದ್ದು.
7. ಅಧಿಕಾರಾವಧಿ ಮುಂದುವರೆಸಿರುವ ಅವಧಿಯಲ್ಲಿ ಆಡಳಿತ ಮಂಡಳಿಗಳು ಯಾವುದೇ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ ಹಾಗೂ ದೈನಂದಿನ ಕಾರ್ಯಚಟುವಟಿಕೆಗಳಿಗೆ ಸೀಮಿತಗೊಳಿಸಿ ಕಾರ್ಯನಿರ್ವಹಿಸತಕ್ಕದ್ದು.
8. ಈಗಾಗಲೇ ಘನ ನ್ಯಾಯಾಲಯಗಳ ಆದೇಶದಂತೆ ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಂಡಿದ್ದಲ್ಲಿ, ಪ್ರಾರಂಭಗೊಳ್ಳಬೇಕಿದ್ದಲ್ಲಿ ಈ ಆದೇಶವನ್ನು ಘನ ನ್ಯಾಯಾಲಯದ ಗಮನಕ್ಕೆ ತಂದು ಘನ ನ್ಯಾಯಾಲಯದ ಆದೇಶದಂತೆ ಕ್ರಮವಿಡತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**
**ಸಹಿ/–**
**ರಂಗನಾಥ ಜಿ.**
**ಸರ್ಕಾರದ ಅಧೀನ ಕಾರ್ಯದರ್ಶಿ–3**
**ಸಹಕಾರ ಇಲಾಖೆ**

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು

ಸಂಖ್ಯೆ: ಸಿಒ 34 ಸಿಎಲ್‌ಎಮ್ 2024 (ಇ), ಬೆಂಗಳೂರು, ದಿನಾಂಕ: 13.06.2024

### ಮಾರ್ಪಾಡು ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಎ(4)(5), 28(ಬಿ), 29(ಎಫ್) (4), 30(1), 31 ಮತ್ತು 39(ಎ) ಗಳಿಗೆ ವಿನಾಯಿತಿ ನೀಡಿ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಆಡಳಿತ ಮಂಡಳಿಗಳ ಚುನಾವಣೆಗಳನ್ನು ನಡೆಸುವ ಕುರಿತು ದಿನಾಂಕ: 05.06.2024 ರಲ್ಲಿ ಕ್ರಮ ಸಂಖ್ಯೆ: 01 ರಿಂದ 08 ರವರೆಗೆ ನಿರ್ದೇಶನಗಳನ್ನು ನೀಡಿ ಆದೇಶಿಸಲಾಗಿರುತ್ತದೆ. ಮುಂದುವರೆದು, ಆಡಳಿತಾತ್ಮಕ ಕಾರಣಗಳಿಂದಾಗಿ ದಿನಾಂಕ: 05.06.2024 ರ ಆದೇಶದಲ್ಲಿನ ಕ್ರ. ಸಂಖ್ಯೆ: 01 ಮತ್ತು 03 ರಂತೆ ನೀಡಿರುವ ನಿರ್ದೇಶನಗಳನ್ನು ಅನುಕ್ರಮವಾಗಿ ಈ ಕೆಳಕಂಡಂತೆ ಮಾರ್ಪಾಡು ಮಾಡಿ ಆದೇಶಿಸಿದೆ. ಇನ್ನುಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

- ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ವೇಳಾಪಟ್ಟಿ ಪ್ರಕಟವಾದಂತಹ ಪ್ರಕರಣಗಳಲ್ಲಿ ಮತ್ತು ಮತದಾನದ ಹಕ್ಕುಳ್ಳ ಸದಸ್ಯ ಸಹಕಾರ ಸಂಘಗಳ ಎಲ್ಲಾ ಡೆಲಿಗೇಟ್‌ಗಳನ್ನು ಆಯ್ಕೆ ಮಾಡಿ ಅಂತಿಮ ಪಟ್ಟಿ ಸಿದ್ದಪಡಿಸಲು ಸಂಘಕ್ಕೆ (ಮಾಧ್ಯಮಿಕ, ಒಕ್ಕೂಟ (ಫೆಡರಲ್ ಸಂಸ್ಥೆ), ಅಪೆಕ್ಸ್ ಸಹಕಾರ ಸಂಘಗಳು) ಸಲ್ಲಿಸಿದ ಪ್ರಕರಣಗಳಲ್ಲಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿ ದಿನಾಂಕ: 21.03.2024ಕ್ಕೆ ಯಾವ ಹಂತದಲ್ಲಿ ನಿಂತು ಹೋಗಿದೆಯೋ ಆ ಹಂತದಿಂದಲೇ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸತಕ್ಕದ್ದು.
- ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ವೇಳಾಪಟ್ಟಿ ಪ್ರಕಟವಾಗದೆ ಇರುವ ಎಲ್ಲಾ ಪ್ರಕರಣಗಳಲ್ಲಿ ಕರಡು ಅನರ್ಹ ಮತದಾರರ ಪಟ್ಟಿ ಪ್ರಕಟಿಸಲು 2022–23ನೇ ಸಾಲಿನ ಸಹಕಾರ ವರ್ಷವನ್ನು ಒಳಗೊಂಡಂತೆ ಪ್ರಕರಣ 20(2)(J-iv)(J-v) ರಲ್ಲಿಯ ಅವಕಾಶಗಳ ಷರತ್ತನ್ನು ಪೂರೈಸಿರುವ ಕುರಿತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ನಿಯಮ 13–ಡಿ, (2)(2–ಎ) ರಲ್ಲಿಯ ಅವಕಾಶಗಳಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಹೊಸದಾಗಿ ಅವಕಾಶ ನೀಡಿ ನೋಟೀಸು ನೀಡತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**
**ಸಹಿ/–**
**ರಂಗನಾಥ ಜಿ.**
**ಸರ್ಕಾರದ ಅಧೀನ ಕಾರ್ಯದರ್ಶಿ–3**
**ಸಹಕಾರ ಇಲಾಖೆ**

# ಅತಿ ಶೀಘ್ರದಲ್ಲಿ ರಾಷ್ಟ್ರೀಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಆರಂಭ



ಬಹುನಿರೀಕ್ಷಿತ ರಾಷ್ಟ್ರೀಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು
28ನೇ ಜುಲೈ-2024ರಂದು ಹೈದರಬಾದ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳಿಗಾಗಿ ರಾಷ್ಟ್ರೀಯ ಫೆಡರೇಷನ್ (ಮಹಾಮಂಡಳ)ವನ್ನು ಪ್ರಾರಂಭಿಸಲಾಗುವುದು. ಮಹಾರಾಷ್ಟ್ರದ ಅಧ್ಯಕ್ಷರು ಕಾಕಾ ಕೊಯಿತೆ ಗುಜರಾತ್ ರಾಜ್ಯದ ಜಿ.ಎಚ್.ಅಮೀನ್ ಹಾಗೂ ಕರ್ನಾಟಕ ರಾಜ್ಯದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ ನಿರ್ದೇಶಕರಾದ ಡಾ|| ಸಂಜಯ ಪಿ. ಹೊಸಮಠ ಅವರುಗಳು ಈ ಸಂಸ್ಥೆಯ ಆರಂಭಕ್ಕೆ ಹೆಚ್ಚಿನ ಶ್ರಮವಹಿಸಿರುತ್ತಾರೆ.

ದೇಶದ 80,000 ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಪ್ರತ್ಯೇಕ ಉನ್ನತ ಸಂಸ್ಥೆ ಇರುವುದಿಲ್ಲ. ಆದ್ದರಿಂದ ರಾಷ್ಟ್ರೀಯ ಮಟ್ಟದಲ್ಲಿ ಕ್ರೆಡಿಟ್ ಸಹಕಾರ ಸಂಘಗಳಿಗೆ ಪ್ರತ್ಯೇಕ ಒಕ್ಕೂಟವನ್ನು 28ನೇ ಜುಲೈ 2024ರಂದು ಹೈದರಾಬಾದ್‌ನಲ್ಲಿ ಪ್ರಾರಂಭಿಸಲಾಗುವುದು ಎಂದು ಮಹಾರಾಷ್ಟ್ರ ರಾಜ್ಯ ಸಹಕಾರಿ ಕ್ರೆಡಿಟ್ ಸೊಸೈಟಿ ಫೆಡರೇಷನ್ (MAFCOCS) ಅಧ್ಯಕ್ಷ ಕಾಕಾ ಕೊಯಿತೆ ಅವರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಅವರು ಫೆಡರೇಷನ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಅವರು ಈ ವರದಿಯ ವಿವರಗಳನ್ನು ದೂರವಾಣಿಯಲ್ಲಿ ಹಂಚಿಕೊಂಡಿದ್ದಾರೆ. ಕ್ರೆಡಿಟ್ ಸೊಸೈಟಿಗಳಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ ಪ್ರತ್ಯೇಕ ಒಕ್ಕೂಟವನ್ನು ಅಧಿಕೃತವಾಗಿ ಪ್ರಾರಂಭಿಸಲು ನಾವು ಸಿದ್ಧರಿದ್ದೇವೆ ಮತ್ತು ಇದನ್ನು 28 ಜುಲೈ 2024 ರಂದು ಪ್ರಾರಂಭಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ರಾಷ್ಟ್ರೀಯ ಮಹಾಮಂಡಳವನ್ನು ಸ್ಥಾಪಿಸುವ ಆರಂಭಿಕ ಪ್ರಕ್ರಿಯೆಯು ಬಹುತೇಕ ಮುಗಿದಿದೆ ಮತ್ತು ಅದಕ್ಕಾಗಿ ಉಪವಿಧಿಗಳನ್ನು ಸಹ ಸಿದ್ಧಪಡಿಸಲಾಗುತ್ತಿದೆ ಎಂದು ಕೊಯಿತೆ ಹೇಳಿದರು.

ಗುಜರಾತ್ ರಾಜ್ಯ ಸಹಕಾರ ಕ್ರೆಡಿಟ್ ಸೊಸೈಟೀಸ್ ಫೆಡರೇಷನ್ ಅಧ್ಯಕ್ಷರಾದ ಘನಶ್ಯಾಮ್ ಭಾಯಿ ಅಮೀನ್ ಮತ್ತು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ ನಿರ್ದೇಶಕರಾದ ಡಾ|| ಸಂಜಯ ಪಿ ಹೊಸಮಠ ಇದರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದರು. ಒಕ್ಕೂಟವನ್ನು ಸ್ಥಾಪಿಸುವ ಕುರಿತು ಹಲವು ಚರ್ಚೆಗಳು ನಡೆದಿದ್ದು ಅಂತಿಮ ಸಭೆಯು ಕೆಲವೇ ದಿನಗಳಲ್ಲಿ ನಡೆಯಲಿದೆ ಎಂದು ಅವರು ಹೇಳಿದರು.

ನವದೆಹಲಿಯ ಐಸಿಆರ್‌ನಲ್ಲಿ ನಡೆದ ಸಹಕಾರ ಭಾರತಿಯ ಸಮ್ಮೇಳನದಲ್ಲಿ ಈ ಕಲ್ಪನೆಯು ವೇಗವನ್ನು ಪಡೆದುಕೊಂಡಿತು. ಇದು ರಾಷ್ಟ್ರೀಯ ಮಟ್ಟದಲ್ಲಿ ಕ್ರೆಡಿಟ್ ಸೊಸೈಟಿಗಳನ್ನು ಬೆಂಬಲಿಸಲು ವಿಶೇಷ ಸಂಸ್ಥೆಯ ವ್ಯಾಪಕ ಬೆಂಬಲ ಮತ್ತು ಅಗತ್ಯವನ್ನು ಪ್ರತಿಬಿಂಬಿಸುತ್ತದೆ.

ಹಿನ್ನೆಲೆ : ದಿ : 15.02.2020ರಂದು ಮಹಾರಾಷ್ಟ್ರದ ಶಿರಡಿಯಲ್ಲಿ ಅಂತಾರಾಷ್ಟ್ರೀಯ ಸಹಕಾರ ವಿಚಾರಗೋಷ್ಠಿಯನ್ನು ಏರ್ಪಡಿಸಿ ಚರ್ಚಿಸಲಾಗಿತ್ತು. ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳು ಪಾಲ್ಗೊಂಡಿದ್ದರು.

ದಿ:2 ಮತ್ತು 3 ಡಿಸೆಂಬರ್, 2023 ರಂದು ನಡೆದ ಸಹಕಾರ ಭಾರತೀಯ ಸಮ್ಮೇಳನದಲ್ಲಿ ಪತ್ತಿನ ಮಹಾಮಂಡಳದ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತಮಂಡಳಿ ನಿರ್ದೇಶಕರುಗಳು ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ರಚನೆ ಕುರಿತಂತೆ ನಿರ್ಣಯ ಕೈಗೊಳ್ಳಲಾಗಿತ್ತು. ಕ್ರೆಡಿಟ್ ಸೊಸೈಟಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ಮಟ್ಟದಲ್ಲಿ ಮೀಸಲಾದ ರಾಷ್ಟ್ರೀಯ ಒಕ್ಕೂಟವನ್ನು ರಚಿಸುವ ಅಗತ್ಯವಿದ್ದು, ಇದೀಗ ಕಾರ್ಯಗತಗೊಳಿಸಲಾಗುತ್ತಿದೆ.